ಸಂಪುಟ: 01 ಸಂಚಿಕೆ: 20 ಪುಟ: 04 ಬೆಲೆ: 02 ಬುಧವಾರ ಜೂನ್ 24 2026 ಮೊ: 7411699198/7406928404

# ಅಜಾತ ಶತ್ರು

ಪ್ರದೀಪಕುಮಾರ
ಸಂಪಾದಕರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ




Volume:01 Issue:20 Pages:04 Price:02 WEDNESDAY JUNE 24 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ನಮ್ಮ ಸಾಧನೆಯ ಗುಟ್ಟು ಗೌಪ್ಯವಾಗಿದ್ದಷ್ಟು ಸಾಧಕರಾಗಲು ಅಡೆತಡೆಗಳು ಬರುವುದಿಲ್ಲ ಸುಲಭವಾಗುತ್ತದೆ.



ವಾಣಿ ಭಂಡಾರಿ.

# ಬಿಡದಿ ಟೌನ್ ಶಿಪ್ ಕುರಿತು ರೈತರ ಸಮ್ಮುಖದಲ್ಲೇ ಚರ್ಚೆಯಾಗಲಿ : ಹೆಚ್ಡಿಕೆ

**ಬೆಂಗಳೂರು: ಬಿಡದಿ ಟೌನ್‌ಶಿಪ್ ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ ಭೂಮಿಯನ್ನು ಕಳೆದುಕೊಳ್ಳುವ ರೈತರ ಸಮ್ಮುಖದಲ್ಲೇ ಚರ್ಚೆ ನಡೆಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಪ್ರತಿಪಾದಿಸಿದ್ದಾರೆ.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ರೀತಿಯ ಸವಾಲು ಅಲ್ಲ. ಪಂಥಾಹ್ವಾನದ ಪ್ರಶ್ನೆಯೂ ಅಲ್ಲ. ರೈತರ ಅಭಿಪ್ರಾಯಕ್ಕೆ ವಿರುದ್ಧವಾಗಿ ಸರ್ಕಾರ ಕೃಷಿಭೂಮಿಯನ್ನು ಸ್ವಾದೀನಪಡಿಸಿಕೊಳ್ಳಲು ಮುಂದಾಗಿರುವುದನ್ನು ವಿರೋಧಿಸಿ 450ಕ್ಕೂ ಹೆಚ್ಚು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಅವರ ಸಮಸ್ಯೆಗೆ ಪರಿಹಾರ ದೊರೆಯಬೇಕು ಎಂದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರು ಜೂ.26 ರಂದು ವಿಧಾನಸೌಧದಲ್ಲಿ ಚರ್ಚೆಗೆ ಆಹ್ವಾನಿಸಿದ್ದಾರೆ.

ಆದರೆ ಕುಣಿಗಲ್, ಶ್ರೀರಂಗಪಟ್ಟಣ, ಕೆ.ಆರ್.ನಗರ ಸೇರಿದಂತೆ ಅಂದು ಬೆಳಿಗ್ಗೆಯಿಂದ ಸಂಜೆಯವರೆಗೆ ಹಲವು ಕಾರ್ಯಕ್ರಮಗಳು ನಿಗದಿಯಾಗಿವೆ. ಹೀಗಾಗಿ ಜೂ.27 ರಂದು ಭೈರಮಂಗಲದಲ್ಲಿ ರೈತರ ಸಮುಖದಲ್ಲಿ ಚರ್ಚೆ ಮಾಡಬೇಕು. ವಿಧಾನಸೌಧದಲ್ಲಿ ಈ ಬಗ್ಗೆ ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಹೇಳಿದರು.



ಸರ್ಕಾರ ಶೇ.80 ರಷ್ಟು ರೈತರು ಭೂಸ್ವಾಧೀನಕ್ಕೆ ಒಪ್ಪಿದ್ದಾರೆ ಎನ್ನುತ್ತಿದೆ. ಆದರೆ ಧರಣಿನಿರತ ರೈತರು ಶೇ.80ರಷ್ಟು ರೈತರು ಒಪ್ಪಿಲ್ಲ ಎನ್ನುತ್ತಿದ್ದಾರೆ. ಹೀಗಾಗಿ ರೈತರ ಸಮ್ಮುಖದಲ್ಲೇ ಚರ್ಚೆ ಮಾಡೋಣ ಎಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ.

ಯಾವುದೇ ತಂಡವಿಲ್ಲ: ಮುಖ್ಯಮಂತ್ರಿಗಳು ನಿಮ ಐದು ಜನರ ತಂಡದೊಂದಿಗೆ ವಿಧಾನಸೌಧಕ್ಕೆ ಚರ್ಚೆಗೆ ಬನ್ನಿ ಎಂದು ಪತ್ರ ಬರೆದಿದ್ದಾರೆ. ತಂಡವನ್ನು ಅವರು ಕಟ್ಟಿಕೊಂಡಿರಬೇಕು. ನನಗೆ ಯಾವುದೇ ತಂಡವಿಲ್ಲ. ಇರುವುದು ರೈತರ ಪರ ತಂಡ ಎಂದು ವಾಗ್ದಾಳಿ ನಡೆಸಿದರು. ಟೌನ್‌ಶಿಪ್‌ಗೆ ಚರ್ಚೆಗೆ ಕರೆದಂತೆಯೂ ಇರಬೇಕು, ಆ ಚರ್ಚೆಯು ಆಗಲೂಬಾರದು ಎಂಬ ಅಭಿಪ್ರಾಯದಿಂದ ವಿಧಾನಸೌಧದಲ್ಲಿ ಚರ್ಚೆಗೆ ಆಹ್ವಾನಿಸಿರಬೇಕು. ಸಮಸ್ಯೆಗೆ ಒಳಗಾದವರನ್ನು ಹೊರತುಪಡಿಸಿ ಮಾತನಾಡುವುದರಲ್ಲಿ ಅರ್ಥವಿಲ್ಲ. ಬಿಜೆಪಿ-ಜೆಡಿಎಸ್ ಸರ್ಕಾರವಿದ್ದಾಗ ಕಾಂಗ್ರೆಸ್‌ನ ಎಲ್ಲಾ ನಾಯಕರು ಏನೇನು ವಾಗ್ದಾಳಿ ನಡೆಸಿದ್ದರು, ಈಗ ಏನು ಮಾತನಾಡುತ್ತಿದ್ದಾರೆ ಎಂಬುದಕ್ಕೆ ಹಲವು ದಾಖಲೆಗಳಿವೆ. ಇವರು ಸರ್ಕಾರ ನಡೆಸುವುದು ನಾಡಿನ ಅಭಿವೃದ್ಧಿಗಲ್ಲ, ಅವರವರ ಅಭಿವೃದ್ಧಿ ಮಾಡಿಕೊಂಡು ಹೋಗುತ್ತಿದ್ದಾರೆ ಎಂದು ಆರೋಪಿಸಿದರು.


ವಿಧಾನಸೌಧದಲ್ಲಿ ಚರ್ಚೆ ಮಾಡಿದರೆ ತಾರ್ಕಿಕ ಅಂತ್ಯ ಕಾಣುವುದಿಲ್ಲ. ಭೂಮಿ ಕಳೆದುಕೊಳ್ಳುವ ರೈತರ ಸಮ್ಮುಖದಲ್ಲಿ ಚರ್ಚಿಸಿ ಯೋಜನೆಯಿಂದ ಸಮಸ್ಯೆಗೆ ಒಳಗಾಗುತ್ತಿರುವ ರೈತರ ಜೊತೆ ನೇರಾನೇರ ಚರ್ಚೆ ಮಾಡಿದರೆ ಮುಗಿಯಲಿದೆ. ಈ ಟೌನ್‌ಶಿಪ್ ಯಾರಿಂದಾಯಿತು, ಹೀಗೇಕಾಯಿತು ಎಂಬುದು ಮುಖ್ಯ ಅಲ್ಲ. ಸರ್ಕಾರದ ವಿರುದ್ಧ ದನಿಯೆತ್ತಿರುವ ರೈತರಿಗೆ ಬೆಂಬಲ ನೀಡುತ್ತಿದ್ದೇನೆ. ಈ ವಿಚಾರದಲ್ಲಿ ಯಾವುದೇ ಪ್ರತಿಷ್ಠೆಯೂ ಇಲ್ಲ. ಯಾರ ಹೆಸರನ್ನೂ ಹಾಳು ಮಾಡುವ ಉದ್ದೇಶವೂ ಇಲ್ಲ ಎಂದು ಸ್ಪಷ್ಟಪಡಿಸಿದರು. ರೈತರನ್ನು ಉಳಿಸಲು ಕಾನೂನು ವ್ಯಾಪ್ತಿಯಲ್ಲಿ ನಡೆಸುವ ಹೋರಾಟಕ್ಕೆ ಬೆಂಬಲ ನೀಡುವುದಾಗಿ ಅವರು ತಿಳಿಸಿದರು.

ವಿಶೇಷ ಅರ್ಥ ಬೇಡ: ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀ-ಜಿಯವರನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿ ಮಾಡಿರುವುದಕ್ಕೆ ವಿಶೇಷ ಅರ್ಥ ಬೇಡ. ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಧರ್ಮಗುರುಗಳನ್ನು ಭೇಟಿ ಮಾಡಿದ್ದಾರೆ. ಯಾವುದೇ ರಾಜಕೀಯ ಚರ್ಚೆಯಾಗಿಲ್ಲ ಎಂಬುದನ್ನು ಮುಖ್ಯಮಂತ್ರಿಗಳೇ ಸ್ಪಷ್ಟಪಡಿಸಿದ್ದಾರಲ್ಲವೇ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

## ಕುಷ್ಟಗಿವರೆಗೂ ಸೂಪರ್‌ಫಾಸ್ಟ್ ರೈಲು ವಿಸ್ತರಣೆಗೆ ಮನವಿ

ಅ.ಶ. ಸುದ್ದಿ ಕುಷ್ಟಗಿ

**ಕುಷ್ಟಗಿ: ಬೆಂಗಳೂರು ಹುಬ್ಬಳ್ಳಿ ನಡುವೆ ಸಂಚರಿಸುವ ಸೂಪರ್‌ಫಾಸ್ಟ್ ರೈಲು (20688/20687)ಯನ್ನು ಗದಗ ಜಂಕ್ಷನ್ ಮೂಲಕ ಕುಷ್ಟಗಿವರೆಗೆ ವಿಸ್ತರಿಸುವಂತೆ ಆಗ್ರಹಿಸಿ ಕುಷ್ಟಗಿ ರೈಲ್ವೆ ಹೋರಾಟ ಸಮಿತಿಯು ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿತು.**



ಕೊಪ್ಪಳದ ಬಿಜೆಪಿ ಕಚೇರಿಯಲ್ಲಿ ನಡೆದ ಭೇಟಿಯಲ್ಲಿ ಸಮಿತಿಯ ಪ್ರಧಾನ ಕಾರ್ಯದರ್ಶಿ ವೀರೇಶ ಬಂಗಾರಶೆಟ್ಟರ್, ಬಿ.ಎಂ. ಜೋಶಿ, ಭೀಮನಗೌಡ ಪಾಟೀಲ, ಶೈಜಲಾ ಬಾಗಲಿ ಹಾಗೂ ಬಸವರಾಜ ಹಳ್ಳೂರು ಅವರು ಸಂಸದರನ್ನು ಭೇಟಿ ಮಾಡಿ ರೈಲು ವಿಸ್ತರಣೆಯ ಅಗತ್ಯವನ್ನು ವಿವರಿಸಿದರು. ಈ ವೇಳೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಈ ಹಿಂದೆ ಬರೆದಿದ್ದ ಪತ್ರವನ್ನು ನೆನಪಿಸಿದ ವೀರೇಶ ಬಂಗಾರಶೆಟ್ಟರ್, ಬೇಡಿಕೆಗೆ ಶೀಘ್ರ ಸ್ಪಂದಿಸುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸದ ಬಸವರಾಜ ಬೊಮ್ಮಾಯಿ, ವಿಷಯ ತಮ್ಮ ಗಮನದಲ್ಲಿದ್ದು, ತಕ್ಷಣವೇ ಅಗತ್ಯ ಫಾಲೋಅಪ್ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ, ಡಾ. ಬಸವರಾಜ್ ಕ್ಯಾವಟರ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ಬೆಂಗಳೂರು?ಹುಬ್ಬಳ್ಳಿ ನಡುವೆ ಸಂಚರಿಸುವ ಸೂಪರ್‌ಫಾಸ್ಟ್ ರೈಲನ್ನು ಗದಗ ಮೂಲಕ ಕುಷ್ಟಗಿವರೆಗೆ ವಿಸ್ತ-ರಿಸುವಂತೆ ಈಗಾಗಲೇ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹಾಗೂ ಹುಬ್ಬಳ್ಳಿಯ ನೈರುತ್ಯ ರೈಲ್ವೆ ವಲಯದ ಅಧಿಕಾರಿಗಳಿಗೆ ಸಹ ಮನವಿ ಸಲ್ಲಿಸಲಾಗಿದೆ.

## ಶರಣರ ಹೆಸರಿನಲ್ಲಿ ನಡೆಯುವ ಸಮಾವೇಶಕ್ಕೆ ಅವಕಾಶ ನೀಡದಂತೆ ಆಗ್ರಹ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಬಸವ ಕಲ್ಯಾಣದಲ್ಲಿ ಜೂನ್ 28ಕ್ಕೆ ನಡೆಯುವ ಸಮಾವೇಶಕ್ಕೆ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು ಎಂದು ಜಿಲ್ಲಾ ಲಿಂಗಾಯತ ಹಾಗೂ ಬಸವಪರ ಸಂಘಟನೆಗಳು ಸರ್ಕಾರವನ್ನು ಆಗ್ರಹಿಸಿವೆ. ಬಸವಾದಿ ಶರಣರ ಹೆಸರಿನಲ್ಲಿ ಹಿಂದೂ ಸಮಾವೇಶ ನಡೆಸಲು ನಿಷೇಧಿಸಬೇಕು ಎಂದು ಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ಸೋಮವಾರ ಜಿಲ್ಲಾಧಿಕಾರಿಗಳ ಮುಖಾಂತರ ಸಂಘಟನೆಗಳ ಪ್ರಮುಖರು ಸರ್ಕಾರಕ್ಕೆ ಸಲ್ಲಿಸಿದರು.**

ಕನ್ನೇರಿ ಮಠದ ಕಾಡಸಿದ್ದೇಶ್ವರ ಸ್ವಾಮಿ ಈ ಹಿಂದೆ ಬಸವ ಸಂಸ್ಕೃತಿ ಅಭಿಯಾನ



ನಡೆಸಿದ ಲಿಂಗಾಯತ ಮಠಾಧಿಪತಿಗಳಿಗೆ ಅಶ್ಲೀಲ, ಅವಾಚ್ಯ, ಅಸಂವಿಧಾನಿಕ ಭಾಷೆಯನ್ನು ಬಳಸಿ ಅಪಮಾನ ಮಾಡಿದ್ದಾರೆ. ಸಮಾವೇಶಕ್ಕೆ ಕನ್ನೇರಿ ಕಾಡಸಿದ್ದೇಶ್ವರ ಸ್ವಾಮಿಗಳು ಬರುವುದನ್ನು ತಡೆಯಬೇಕು. ಮತ್ತು ಅವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿವೆ. ಲಿಂಗಾಯತ ಧರ್ಮಿಯರ ಪವಿತ್ರಕ್ಷೇತ್ರ ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿ ಉದ್ದೇಶಿತ ಬಸವಾದಿ ಶರಣರ ಹೆಸರಿನ ಹಿಂದೂ ಸಮಾವೇಶದಲ್ಲಿ ಭಾಗವಹಿಸಿ ಮತ್ತೇ ಬಸವತತ್ವವನ್ನು ತಿರುಚುವ, ಲಿಂಗಾಯತ ಧರ್ಮವನ್ನು ಕಲುಷಿತಗೊಳಿಸುವ ಕೆಲಸ ಮಾಡುತ್ತಾರೆ. ಮತ್ತು ಬಸವತತ್ವದವರನ್ನು ಬಸವ ತಾಲಿಬಾನಿ ಎಂದು ಹೀಯಾಳಿಸುವುದು ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸುವುದೇ ಇವರ ಸಮಾವೇಶದ ಮುಖ್ಯ ಕೆಲಸವಾಗಿದೆ. ಶಾಂತಿ ಭಂಗ ಮಾಡುವ, ಕೋಮು-ಗಲಭೆ ಮಾಡುವ, ಜನರ ಮದ್ಯೆ ವಿಷಬೀಜ ಬಿತ್ತುವ ಈ ಅವಿವೇಕದ ಕನ್ನೇರಿ ಮಠದ ಸ್ವಾಮಿಯ ವಿರುದ್ಧ ತುರ್ತಾಗಿ ಸೂಕ್ತ ಕಾನೂನು ಕ್ರಮಕೈಗೊಳ್ಳಬೇಕೆಂದು ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ. ಈ ಸಂಬಂಧ ಹೈಕೋರ್ಟ್ ಮತ್ತು ಸುಪ್ರಿಂಕೋರ್ಟ್ ಅವರಿಗೆ ಒಳ್ಳೆಯ ಪ್ರಜೆಯಲ್ಲ ಎಂದು ಛೀಮಾರಿ ಹಾಕಿವೆ. ಆದರೂ ಈ ಮನುಷ್ಯ ಬಸವತತ್ವವನ್ನು ತಿರುಚುವ, ಲಿಂಗಾಯತ ಧರ್ಮವನ್ನು ಕಲುಷಿತ ಮಾಡುವ, ಬಸವಭಕ್ತರನ್ನು ನಿಂದಿಸುವ ಕೆಲಸವನ್ನು ನಿರಂತರ ಮಾಡುತ್ತಿದ್ದಾರೆ. ಆದ್ದರಿಂದ ಬಸವಕಲ್ಯಾಣದಲ್ಲಿ ಲಿಂಗಾಯತ ಮತ್ತು ಬಸವದ್ರೋಹಿ ಕನ್ನೇರಿ ಸ್ವಾಮಿಯ ಕಾರ್ಯಕ್ರಮ ರದ್ದುಗೊಳಿಸಬೇಕು ಮತ್ತು ಅವರ ಬಸವಕಲ್ಯಾಣ ಪ್ರವೇಶವನ್ನು ನಿಷೇಧಿಸಬೇಕು. ಈ ಸಂದರ್ಭದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ಬಸವರಾಜ ಬಳ್ಳೊಳ್ಳಿ, ಜಿಲ್ಲಾ ಅಧ್ಯಕ್ಷರಾದ ಹನುಮೇಶ ಕಲ್ಮಂಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜೇಶ ಸಸಿಮಠ, ತಾಲೂಕಾ ಕಾರ್ಯದರ್ಶಿ ಶರಣಬಸವನಗೌಡ ಪಾಟೀಲ ಉಪಸ್ಥಿತರಿದ್ದರು.

## ಕಿನ್ನಾಳದಲ್ಲಿ ಪ್ರಯಾಣಿಕರ ಪರದಾಟ :ಬಸ್ ನಿಲುಗಡೆಗೆ ಗ್ರಾಮಸ್ಥರ ಮನವಿ



ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ತಾಲೂಕಿನ ಕಿನ್ನಾಳ ಗ್ರಾಮದ ಬಸವೇಶ್ವರ ವೃತ್ತದಲ್ಲಿರುವ ಸ್ವಾಮಿ ವಿವೇಕಾನಂದ ಬಸ್ ತಂಗುದಾಣದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳ ನಿಲುಗಡೆಯನ್ನು ಪುನಃ ಆರಂಭಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪರಮೇಶ್ವರಯ್ಯ ತೆಳಗಡೆಮಠ ಅವರಿಗೆ ಮನವಿ ಸಲ್ಲಿಸಿದರು.**

ಈ ಹಿಂದೆ ಈ ಬಸ್ ತಂಗುದಾಣದಲ್ಲಿ ವಿವಿಧ ಮಾರ್ಗಗಳ ಎಲ್ಲಾ ಬಸ್‌ಗಳು ನಿಯಮಿತವಾಗಿ ನಿಲುಗಡೆ ಮಾಡುತ್ತಿದ್ದವು. ಆದರೆ ಕಳೆದ ಆರು ತಿಂಗಳಿಂದ ಬಸ್‌ಗಳ ನಿಲುಗಡೆ ಸ್ಥಗಿತಗೊಂಡಿದ್ದು, ಇದರಿಂದ ಗ್ರಾಮಸ್ಥರು, ವಿದ್ಯಾರ್ಥಿಗಳು, ವಯೋವೃದ್ಧರು, ಮಹಿಳೆಯರು ಹಾಗೂ ಮಕ್ಕಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಮನವಿಯಲ್ಲಿ ತಿಳಿಸಿದ್ದಾರೆ. ಈ ಕುರಿತು ಮೌನೇಶ ಕಿನ್ನಾಳ ಮಾತನಾಡಿ ಕಿನ್ನಾಳ ಗ್ರಾಮದ ಬಸವೇಶ್ವರ ವೃತ್ತದ ಸ್ವಾಮಿ ವಿವೇಕಾನಂದ ಬಸ್ ತಂಗುದಾಣವು ಸಾರ್ವಜನಿಕರಿಗೆ ಅತ್ಯಂತ ಅನುಕೂಲಕರವಾಗಿದ್ದು, ಹಿಂದೆ ಎಲ್ಲಾ ಬಸ್‌ಗಳ ನಿಲುಗಡೆ ವ್ಯವಸ್ಥೆ ಇತ್ತು. ಆದರೆ ಕಳೆದ ಕೆಲವು ತಿಂಗಳಿಂದ ಬಸ್‌ಗಳು ಇಲ್ಲಿ ನಿಲ್ಲದೇ ಹೋಗುತ್ತಿರುವುದ-ರಿಂದ ಶಾಲಾ,ಕಾಲೇಜು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ತೊಂದರೆಯಾಗುತ್ತಿದೆ.

ಕೂಡಲೇ ಕೊಪ್ಪಳ ಕೆಎಸ್‌ಆರ್‌ಟಿಸಿ ಡಿಪೋ ವ್ಯವಸ್ಥಾಪಕರು ಗಮನಹರಿಸಿ ಬಸ್ ನಿಲುಗಡೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕೊಪ್ಪಳ-ಮಂಗಳೂರು, ಕೊಪ್ಪಳ-ಯಲಬುರ್ಗಾ ಹಾಗೂ ಕೊಪ್ಪಳ-ಕಿನ್ನಾಳ ಮಾರ್ಗದ ಬಸ್‌ಗಳನ್ನು ಸ್ವಾಮಿ ವಿವೇಕಾನಂದ ಬಸ್ ತಂಗುದಾಣದಲ್ಲಿ ನಿಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಮನವಿ ಮಾಡಿದರು. ಈ ಹಿಂದೆ ಕೂಡ ಸಂಬಂಧಪಟ್ಟ ಅಧಿಕಾ-ರಿಗಳನ್ನು ಮೌಖಿಕವಾಗಿ ಸಂಪರ್ಕಿಸಿ ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಲಾಗಿತ್ತು.

ಆದರೆ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಇದೀಗ ಲಿಖಿತ ಮನವಿ ಸಲ್ಲಿಸಲಾಗಿದೆ ಎಂದು ಗ್ರಾಮಸ್ಥರು ಹೇಳಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಶ್ರೀಧರ್ ಬಾದಾ, ನಂದರಾಜ್ ಶೇಲ್ಲೆದ್, ಸಂತೋಷ ಕಠಾರೆ, ಉಮೇಶ ಅರಕೇರಿ, ಪ್ರಕಾಶ ಮಡಿವಾಳರ, ನಾರಾಯಣ ಕಡ್ಲಿಬಾಳ ಸೇರಿದಂತೆ ಯುವಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಅಜಾತ ಶತ್ರು ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕಾನೂನು ವಿದ್ಯಾರ್ಥಿಗಳ ಮೇಲೆ ಹಲ್ಲೆ : ಕ್ರಮಕ್ಕೆ ಆಗ್ರಹ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಅಳವಂಡಿ ಪೊಲೀಸ್ ಠಾಣೆಯ ಪಿಎಸ್‌ಐ ಪ್ರಹ್ಲಾದ್ ನಾಯಕ್ ಹಾಗೂ ಕೆಲವು ಪೊಲೀಸ್ ಸಿಬ್ಬಂದಿ ವಿರುದ್ಧ ಕಾನೂನು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ ಆರೋಪ ಕೇಳಿಬಂದಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.**

ಘಟನೆ ಕುರಿತು ಸರ್ವಜ್ಞ ಮೂರ್ತಿ ಮಾತನಾಡಿ ಕಾನೂನು ವಿದ್ಯಾರ್ಥಿಗಳಾದ ಬೋಚನಹಳ್ಳಿ ಗ್ರಾಮದ ಯಲ್ಲಪ್ಪ ತಂದೆ ಸುರೇಶಪ್ಪ ಮೇಟಿ ಹಾಗೂ ಬಸವರಾಜ ತಂದೆ ಗೋಣೆಪ್ಪ ಬಂಡಿ ಅವರು ಜೂನ್ 14ರಂದು ರಾತ್ರಿ 8.30ರ ಸುಮಾರಿಗೆ ಅಳವಂಡಿ ಪೊಲೀಸ್ ಠಾಣೆಗೆ ತೆರಳಿದ್ದರು. ಅವರ ಸ್ನೇಹಿತ ಮರಿತಿಮ್ಮಪ್ಪ ಅವರನ್ನು



ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಯಾವುದೇ ನೋಟಿಸ್ ನೀಡದೆ ಠಾಣೆಗೆ ಕರೆತಂದಿರುವುದನ್ನು ಪ್ರಶ್ನಿಸಲು ಹೋಗಿದ್ದರು ಎಂದು ತಿಳಿಸಿದ್ದಾರೆ.

ಈ ವೇಳೆ ಠಾಣೆಯಲ್ಲಿ ಮರಿತಿಮ್ಮಪ್ಪ ಅವರ ಮೇಲೆ ಹಲ್ಲೆ ನಡೆಯುತ್ತಿತ್ತು. ಘಟನೆಯನ್ನು ಯಲ್ಲಪ್ಪ ಅವರು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕ-ರಿಸುತ್ತಿದ್ದಾಗ ಪಿಎಸ್‌ಐ ಪ್ರಹ್ಲಾದ್ ನಾಯಕ್ ಅವರು ಮೊಬೈಲ್ ಕಸಿದುಕೊಂಡು, ಅವಾಚ್ಯ ಶಬ್ದಗಳಿಂದ ನಿಂದಿಸಿ, ಅಂಗವಿಕಲರಾಗಿರುವ ಯಲ್ಲಪ್ಪ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಇದನ್ನು ಪ್ರಶ್ನಿಸಿದ ಬಸವರಾಜ ಅವರ ಮೇಲೂ ಪೊಲೀಸ್ ಸಿಬ್ಬಂದಿ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿದರು. ನಂತರ ಇಬ್ಬರನ್ನು ಠಾಣೆಯ ಕೋಣೆಯಲ್ಲಿ ಕೂಡಿ ಹಾಕಿ ಥಳಿಸಲಾಗಿದ್ದು, ಮೊಬೈಲ್‌ನಲ್ಲಿದ್ದ ವಿಡಿಯೋಗಳನ್ನು ಬಲವಂತವಾಗಿ ಅಳಿಸುವಂತೆ ಮಾಡಲಾಗಿದೆ.

ಪೊಲೀಸ್ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ಘಟನೆ ಅಳವಂಡಿ ಪೊಲೀಸ್ ಠಾಣೆಯ ಸಿಸಿಟಿವಿ ದೃಶ್ಯಗಳಲ್ಲಿ ದಾಖಲಾಗಿದ್ದು, ಅದನ್ನು ಪರಿಶೀಲಿಸಿ ಪಿಎಸ್‌ಐ ಹಾಗೂ ಸಂಬಂಧಪಟ್ಟ ಸಿಬ್ಬಂದಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕಾನೂನು ವಿದ್ಯಾರ್ಥಿಗಳು ಜೂನ್ 23ರಂದು ಕೊಪ್ಪಳ ನಗರದ ಅಶೋಕ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು, ಆರೋಪದ ಕು-ರಿತು ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂಧರ್ಭದಲ್ಲಿ ಬಸವರಾಜ ಬಂಡಿ, ಯಲ್ಲಪ್ಪ, ಆಸೀಫ್,ಯಲ್ಲಾರ ಲಿಂಗ,ಆನಂದ ವಂಶಿ, ಶ್ರೀನಿವಾಸ್, ಸಿದ್ದು, ಯೋಗೇಶ್,ಫೈಜಲ್ ರಹಮಾನ್, ಎಂ ಡಿ ಜೂಬೆರ್, ರವಿ, ಮಲ್ಲಿಕಾರ್ಜುನ, ಭಾರತ್, ರವಿ ಆಗೋಲಿ,ಅಲ್ಲಪ್ಪ, ಶಿವಪ್ಪ ಬಾವಿಕಟ್ಟಿ,ಅಣ್ಣಪ್ಪ ಬಾವಿಕಟ್ಟಿ,ಇನ್ನು ಅನೇಕರು ಉಪಸ್ಥಿತರಿದ್ದರು.

# ಅಕ್ರಮ ಮದ್ಯ ಮಾರಾಟ : ಇಲಾಖೆಗಳ ದಿವ್ಯ ನಿರ್ಲಕ್ಷ್ಯ

ಅ.ಶ. ಸುದ್ದಿ ಕುಕನೂರು

**ಕುಕನೂರು: ತಾಲ್ಲೂಕಿನಾದ್ಯಂತ ಅಕ್ರಮ ಮದ್ಯ ಮಾರಾಟ ಎಗ್ಗಿಲ್ಲದೇ ಸಾಗಿದರು, ಸಂಬಂಧಿಸಿದ ಅಬಕಾರಿ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳು ನಮಗೂ ಇದಕ್ಕೂ ಏನು ಸಂಬಂಧವಿಲ್ಲಾ ಎನ್ನುವಂತೆ ವರ್ತಿಸುತ್ತಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ.**




ಹೌದು, ಪಟ್ಟಣ ಸೇರಿದಂತೆ ತಾಲ್ಲೂಕಿನ ಕೆಲವೊಂದು ಗ್ರಾಮಗಳಲ್ಲಿ ಹಗಲು, ರಾತ್ರಿ ಎನ್ನದೇ ದಿನದ ಇಪ್ಪತ್ನಾಲ್ಕು ಗಂಟೆಗಳು ನಿರಂತರ ಅಕ್ರಮ ಮದ್ಯ ಮಾರಾಟ ನಡೆಯುತ್ತಿದ್ದು, ಇದರ ಕುರಿತು ಮಾಹಿತಿ ಇದ್ದರು ಸಂಬಂಧಿಸಿದ ಇಲಾಖೆ ಅಧಿಕಾ–ರಿಗಳು ಜಾಣ ಕುರುಡುತನ ಪ್ರದರ್ಶನ ಮಾಡುತ್ತಿದ್ದಾರೆ ಎನ್ನುವ ಗಂಭೀರ ಆರೋಪಗಳು ಕೇಳಿ ಬರುತ್ತಿವೆ. ತಾಲ್ಲೂಕಿನಲ್ಲಿ ರೈತರಿಗೆ ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜ, ಗೊಬ್ಬರಗಳು ಸಿಗುತ್ತವೆಯೋ ಇಲ್ಲವೋ, ಆದರೆ ಕುಡುಕರಿಗೆ ದಿನದ ಇಪ್ಪತ್ನಾಲ್ಕು ಗಂಟೆ ಮದ್ಯ ಮಾತ್ರ ಸಿಗುತ್ತದೆ. ಮೊದ ಮೊದಲು ಯುವಕರು ಹುಟ್ಟು ಹಬ್ಬ, ಮದುವೆ ಸಮಾರಂಭ ಎಂದು ಮೋಜು ಮಸ್ತಿಗಾಗಿ ಬಿಯರ್ ಕುಡಿದು ಮಜ ಅನುಭವಿಸುತ್ತಾ, ಸತತ ಅದರ ದಾಸರಾಗಿ ಹಣ ಕಡಿಮೆ ಬಿದ್ದಾಗ ಚೆಫ್ ಲಿಕ್ಕರ್ ಗಳ ಮೊರೆ ಹೋಗಿ ಕುಡಕರಾಗುತ್ತಿದ್ದಾರೆ.

ಪಟ್ಟಣ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಎಲ್ಲೆಂದರಲ್ಲಿ ಮದ್ಯೆ ಯಾವಾಗ ಬೇಕು ಆವಾಗ ಮದ್ಯ ದೊರೆಯುತ್ತಿರುವುದ–ರಿಂದ ಮದ್ಯದ ದಾಸರಾದ ಯುವಕರು ಕುಡಿದು ಮನೆಯಲ್ಲಿ ಹಾಗೂ ಕುಟುಂಬದಲ್ಲಿ ಜಗಳ ಮಾಡುತ್ತಾ, ಮನೆ ಸಾಮಾನು, ಸರಂಜಾಮು ಅಡ ಇಡುತ್ತಾ ಮನೆಯವರ ಪಾಲಿಗೆ ದುಸ್ವಪ್ನವಾಗಿದ್ದಾರೆ. ಈ ಹಿಂದೆ ಅಂದರೆ ಸುಮಾರು 7–8ವರ್ಷಗಳ ಹಿಂದೆ ಕುಕನೂರು ಠಾಣೆಗೆ ವಿಶ್ವನಾಥ ಹಿರೇಗೌಡ್ರ ಎನ್ನುವ ಪಿಎಸ್ಐ ಇದ್ದಾಗ ಪಟ್ಟಣ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಮದ್ಯ ಮಾರಾಟಕ್ಕೆ ಕಡಿವಾಣವಿತ್ತು, ಆಗ ಕುಟುಂಬಗಳು ಸುಶಿಕ್ಷಿತವಾಗಿದ್ದವು ಆದ–'ರೆ ಅವರ ವರ್ಗಾವಣೆ ನಂತರದಲ್ಲಿ ಮತ್ತೆ ಮದ್ಯ ಮಾರಾಟಗಾರರ ಅಟ್ಟಹಾಸ ಮಿತಿ ಮೀರಿದೆ ಇದಕ್ಕೆ ಕಡಿವಾಣ ಹಾಕುವರು ಇಲ್ಲದಂತಾಗಿದೆ ಎಂದು ಹೆಸರು ಹೇಳಲು ಇಚ್ಚಿಸದ ಮಹಿಳೆಯೊಬ್ಬರು ತಮ್ಮ ಅಳಲನ್ನು ಪತ್ರಿಕೆಯೊಂದಿಗೆ ಹಂಚಿಕೊಂಡರು.

ಈ ಅಕ್ರಮ ಮದ್ಯ ಕಡಿವಾಣ ಹಾಕುವಂತೆ ಹಲವಾರು ಗ್ರಾಮಗಳ ಮಹಿಳೆಯರು ಕುಕನೂರು ಠಾಣೆಗೆ ಮನವಿ ಸಲ್ಲಿಸಿದರು ಪ್ರಯೋಜವಾಗಿಲ್ಲಾ, ಈ ಇಲಾಖೆಗೆ ದೂರು ಸಲ್ಲಿಸಿದರು ಇವರು ಏನು ಕ್ರಮ ಕೈಗೊಂಡಿದ್ದಾರೆ. ಇವರಿಗೆ ಸಾರ್ವಜನಿಕ ಹಿತಾಸಕ್ತಿಗಿಂತ ಬಾರ್ ಮಾಲಕರ ಹಿತಾಸಕ್ತಿಯೇ ಮುಖ್ಯವಾಗಿದೆ ಎಂದು ಆರೋಪಿಸಿದ್ದಾರೆ.


**ಕೆಲವೊಂದು ಮದ್ಯದ ಅಂಗಡಿ ಮಾಲಕರು ಹಳ್ಳಿ ಪ್ರದೇಶಳಿಗೆ ಮದ್ಯ ಸರಬರಾಜು ಮಾಡುತ್ತಿದ್ದಾರೆ ಎನ್ನುವ ಗುಮಾನಿ ಇದ್ದು, ಕಡಿವಾಣ ಹಾಕಬೇಕಾದವರೇ ಮೂಖ ವಿಸ್ಮಿತರಾದರೇ ಇನ್ಯಾರು ಕಡಿವಾಣ ಹಾಕಲು ಸಾಧ್ಯ. ತಾಲೂಕಿನಲ್ಲಿ ಈಗಿರುವ ಮದ್ಯದ ಅಂಗಡಿಗಳಿಂದಲೇ ಅದೇಷ್ಟೋ ಯುವಕರು ದಾರಿ ತಪ್ಪುತ್ತಿದ್ದು, ಬಹು ಮದ್ಯದ ಅಂಗಡಿಗಳು ಪ್ರಾರಂಭ ಆಗುವ ಮುನ್ಸೂಚನೆ ಇದೆ. ಕ್ಷೇತ್ರದ ಶಾಸಕರು, ಕ್ಷೇತ್ರದ ಜನಗಳ ಸ್ವಾಸ್ಥ್ಯ ಕಾಪಾಡಬೇಕೆಂದು ನಾಗರೀಕರ ಆಗ್ರಹವಾಗಿದೆ.**

**ವರದಿ : ಪಂಚಯ್ಯ ಹಿರೇಮಠ.**

## ವಿಧಾನಸೌಧ ಹೊರಗಡೆ ಚರ್ಚೆ ಸೂಕ್ತ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಬಿಡದಿ ಟೌನ್‌ಶಿಪ್‌ಗೆ ಸಂಬಂಧಿಸಿದಂತೆ ವಿಧಾನಸೌಧದ ಬದಲು ರೈತರ ಸಮ್ಮುಖದಲ್ಲೇ ವಿಧಾನಸೌಧದ ಹೊರಗಡೆ ಚರ್ಚೆ ನಡೆಸುವುದು ಸೂಕ್ತ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು. ಬಿಡದಿ ಟೌನ್‌ಶಿಪ್‌ಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸೌಧಕ್ಕೆ ಚರ್ಚೆಗೆ ಬರುವಂತೆ ತಮಗೆ ಆಹ್ವಾನ ನೀಡಿದ್ದಾರೆ.**



ನನ್ನ ಪ್ರಕಾರ ವಿಧಾನಸೌಧದಲ್ಲಿ ಚರ್ಚೆ ನಡೆಸಿದರೆ ಪ್ರಯೋಜನವಿಲ್ಲ. ಈ ಟೌನ್‌ಶಿಪ್‌ನಿಂದ ಭೂಮಿ ಕಳೆದುಕೊಳ್ಳುವ ರೈತರ ಜತೆ ಅವರ ಸ್ಥಳದಲ್ಲೆ ಚರ್ಚೆ ನಡೆಸಿದರೆ ತಾರ್ಕಿಕ ಅಂತ್ಯ ಕಾಣಬಹುದು. ಹಾಗಾಗಿ ವಿಧಾನಸೌಧದ ಹೊರಗಡೆ ಚರ್ಚೆ ನಡೆಸುವುದು ಹೆಚ್ಚು ಸೂಕ್ತ ಎಂದು ಅವರು ಹೇಳಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ತಿಂಗಳ 26 ರಂದು ಚರ್ಚೆಗೆ ಬರುವಂತೆ ನನಗೆ ಆಹ್ವಾನ ನೀಡಿದ್ದಾರೆ. 26 ರಂದು ನನಗೆ ಪೂರ್ವನಿಗದಿತ ಕಾರ್ಯಕ್ರಮಗಳಿವೆ. ಹಾಗಾಗಿ ಜೂ. 27 ರಂದು ಚರ್ಚೆಗೆ ನಾನು ಸಿದ್ಧ. ಆದರೆ ವಿಧಾನಸೌಧದಲ್ಲಿ ಚರ್ಚೆ ಬೇಡ. ಭೂಮಿ ಕಳೆದುಕೊಳ್ಳುವ ರೈತರ ಸಮ್ಮುಖದಲ್ಲೇ ಚರ್ಚೆ ಆಗಬೇಕು ಎಂದು ಅವರು ಬೆಂಗಳೂರಿನ ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಹೇಳಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನನಗೆ ಬರೆದಿರುವ ಪತ್ರದಲ್ಲಿ ನಿಮ್ಮ ತಂಡದ ಐದು ಜನ ವಿಧಾನಸೌಧಕ್ಕೆ ಚರ್ಚೆಗೆ ಬನ್ನಿ ಎಂದು ಬರೆದಿದ್ದಾರೆ. ನನಗೆ ಯಾವ ತಂಡನೂ ಇಲ್ಲ. ಇರುವುದು ರೈತರ ಪರ ತಂಡ ಅಷ್ಟೆ. ಅವರಿಗೆ ತಂಡ ಇರಬಹುದೇನೋ ಎಂದು ತಿರುಗೇಟು ನೀಡಿದರು. ನಾನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಈಗಾಗಲೇ ಪತ್ರ ಬರೆದಿದ್ದೇನೆ. ಈ ತಿಂಗಳ 27 ರಂದು ಚರ್ಚೆಗೆ ಸಿದ್ಧ ಎಂದು ಹೇಳಿದ್ದೇನೆ. ಸವಾಲು–ಪ್ರತಿಸವಾಲು. ಪಂದ್ಯಾಹ್ವಾನ ಯಾವುದೂ ಇಲ್ಲ. ಯಾವ ಪ್ರತಿಷ್ಠೆನೂ ಇಲ್ಲ, ಯಾರ ಹೆಸರು ಕೆಡಿಸುವ ಉದ್ದೇಶವೂ ಇಲ್ಲ. ನೊಂದ ರೈತರ ಧ್ವನಿಯಾಗಿ ನಾನು ಮಾತನಾಡುತ್ತಿದ್ದೇನೆ ಅಷ್ಟೆ ಎಂದರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಯೋಜನೆ ನನ್ನ ಯೋಜನೆ. ಅದನ್ನು ನಾನು ಮುಂದುವರೆಸತ್ತಿದ್ದೆ ಎಂದೆಲ್ಲಾ ಹೇಳುತ್ತಿದ್ದಾರೆ. ಅದೆಲ್ಲಾ ಯಾರ ಯೋಜನೆ, ಯಾರಿಂದ ಏನಾಯ್ತು, ಇದೆಲ್ಲಾ ಬೇಡ. ರೈತರಿಗೆ ತೊಂದರೆಯಾಗಬಾರದು ಅಷ್ಟೇ. ರೈತರ ಪ್ರಕಾರ ಶೇ. 80 ಕ್ಕೂ ಹೆಚ್ಚ ರೈತರು ಭೂಮಿ ಕೊಡಲು ಒಪ್ಪಿಲ್ಲ. ಆದರೆ ಮುಖ್ಯಮಂತ್ರಿಗಳ ಪ್ರಕಾರ ಶೇ. 80 ರಷ್ಟು ಒಪ್ಪಿದ್ದಾರೆ ಎಂದು ಹೇಳಿದ್ದಾರೆ. ಇದನ್ನು ರೈತರ ಸಮುಮುಖದಲ್ಲೇ ಬಗೆಹರಿಸೋಣ ಎಂದರು. ರೈತರ ಅಭಿಪ್ರಾಯಕ್ಕೆ ವಿರುದ್ಧವಾಗಿ ಭೂಸ್ವಾದೀನ ಮಾಡುವುದಕ್ಕೆ ನನ್ನ ವಿರೋಧ. ಸುಮಾರು 450 ದಿನಗಳಿಂದ ರೈತರು ಭೂಸ್ವಾದೀನದ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಹೀಗಿದ್ದರೂ ಸುಮ್ಮನೆ ಅನಗತ್ಯ ಗೊಂದಲ ಸೃಷ್ಟಿಸಿ, ರೈತರು ಒಪ್ಪಿದ್ದಾರೆ ಎಂದೆಲ್ಲಾ ಹೇಳುವುದು ಸರಿ ಕಾಣಲ್ಲ ಎಂದರು. ಎಲ್ಲವೂ ಸಂತ್ರಸ್ತ ರೈತರ ಸಮ್ಮುಖದಲ್ಲೇ ಚರ್ಚೆಯಾಗಿ ಬಗೆಹರಿಸಬೇಕು. ಹಾಗಾಗಿ ವಿಧಾನಸೌಧದ ಬದಲು ರೈತರ ಸಮ್ಮುಖದಲ್ಲಿ ಬಹಿರಂಗ ಚರ್ಚೆ ನಡೆಯಬೇಕು. ಈ ತಿಂಗಳ 27 ರಂದು ಚರ್ಚೆಗೆ ಸಮಯ ನಿಗದಿ ಮಾಡಿದರೆ ಒಳ್ಳೆಯದು ಎಂದು ಕುಮಾರಸ್ವಾಮಿ ತಿಳಿಸಿದರು.

# ಮೊಹರಂ :ಕುದರಿಮೋತಿಯಲ್ಲಿ ಶಾಂತಿ ಸಭೆ

ಅ.ಶ. ಸುದ್ದಿ ಕುಕನೂರು

**ಕುಕನೂರ: ತಾಲ್ಲೂಕಿನ ಕುದರಿಮೋತಿ ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷದ ಮೊಹರಂ ಹಬ್ಬವು ಸಂಭ್ರಮದಿಂದ ಜರುಗಲಿದ್ದು, ಮೊಹರಂ ಹಬ್ಬದ ಅಂಗವಾಗಿ ಗ್ರಾಮದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಳ್ಳಲು ಸಭೆಯನ್ನು ಆಯೋಜಿಸಲಾಗಿತ್ತು. ಪಿಎಸ್ಐ ಟಿ.ಗುರುರಾಜ ಮಾತನಾಡಿ, ಮೊಹರಂ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕರಿಸಬೇಕು. ಯಾವುದೇ ವದಂತಿಗಳಿಗೆ ಕಿವಿಗೊಡದೆ ಪರಸ್ಪರ ಸಹಬಾಳ್ವೆ ಮತ್ತು ಸಹೋದರತ್ವದ ಮನೋಭಾವದಿಂದ ಹಬ್ಬವನ್ನು ಆಚ–ರಿಸಬೇಕು ಎಂದು ಮನವಿ ಮಾಡಿದರು.**



ನಂತರ ದಳಪತಿ ಹನಮಗೌಡ ಪೊ. ಪಾಟೀಲ್ ಮಾತನಾಡಿ ಗ್ರಾಮಸ್ಥರು ಕುದ್ರಮೋತಿಯ ಮೊಹರಂ ಹಬ್ಬ ವಿಶೇಶತೆಗೆ ಖ್ಯಾತಿ ಹೊಂದಿದ್ದು, ಇಲ್ಲಿ ಎಲ್ಲಾ ಸಮುದಾಯದವರು ಕೂಡಿಕೊಂಡು ಭಾವೈಕ್ಯತೆಯಿಂದ ಹಬ್ಬವನ್ನು ಆಚರಣೆ ಮಾಡುತ್ತಾರೆ. ಹಬ್ಬದ ಸಂದರ್ಭದಲ್ಲಿ ಯುವಕರು ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸಿ ಹಬ್ಬವನ್ನು ಯಶಸ್ವಿಯಾಗಿ ನಡೆಸಲು ಸಹಕ–ರಿಸ ಬೇಕು ಎಂದು ಮನವಿ ಮಾಡಿದರು. ನಮ್ಮ ಕುದರಿಮೋತಿ ಮೊಹರಂ ಹಬ್ಬ ರಾಜ್ಯಕ್ಕೆ ನಂಬರ್ ಒನ್ ಹಾಗೂ ಎರಡನೇ ಸ್ಥಾನ ಲಿಂಗಸೂರು ತಾಲೂಕು ಮುದಗಲ್ ಹೆಸರು ವಾಸಿಯಾಗಿದೆ ಎಂದರು. ನಮ್ಮ ಗ್ರಾಮದ ಯುವಕರು ಹಿರಿಯರ ಅಣತಿಯಂತೆ ನಡೆದುಕೊಂಡು ಮೊಹರಂ ಹಬ್ಬದ ಸಂದರ್ಭದಲ್ಲಿ ಯಾವುದೇ ಜಗಳ ಮತ್ತು ಗಲಾಟೆ ಮಾಡದೇ ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುತ್ತಾರೆ ಎನ್ನುವ ಭರವಸೆ ನಮಗಿದೆ ಎಂದರು. ಈ ಸಂದರ್ಭದಲ್ಲಿ ಪಿಎಸ್ಐ ಸಂಗನಗೌಡ, ವೇಷಗಾರ ಸಮಾಜದ ಮುಖಂಡರಾದ ಚಿನ್ನಪ್ಪ, ದುರಗಪ್ಪ ದೂಪಂ,ಚಂದಪ್ಪ, ರಮೇಶ ಇದ್ದರು.

ಸಭೆಯಲ್ಲಿ ಮಂಜುನಾಥ ಗಟ್ಟೆಪ್ಪನವರ್ ನಿರೂಪಿಸಿದರು, ಗ್ರಾಮದ ಮುಖಂಡರಾದ ಬಸಪ್ಪ ದೊಡ್ಡಮನಿ, ಸುಭಾಷ್ ಈಡಿಗೇರ, ಡಾ.ಹುಸೇನಬಾಷ ಮಕಾಂದರ್, ಖಾಸೀಂಸಾಬ ಮಾಕಾಂದರ್,ಮಾಜಿ ಗ್ರಾಮ ಪಂಚಾಯತಿ ಸದಸ್ಯರಾದ ಮಾಬುಸಾಬ ಮಕಂದಾರ್, ಶರಣಯ್ಯ ಜಂಗಮೂರು, ರವಿ ಕಟಗಿ, ಮುಖಂಡರಾದ ದ್ಯಾಮಣ್ಣ ಉಚ್ಚಲಕುಂಟಿ, ಮಹಾಂತಪ್ಪ ಶಿಡ್ನಳ್ಳಿ, ಶಿವಪ್ಪ ಬೇವಿನಗಿಡದ್, ಉಮೇಶ ತಲ್ಲೂರ, ಪಂಪಾಪತಿ ವಣಗೇರಿ ಸೇರಿದಂತೆ ಇತರರು ಇದ್ದರು.

## ರಾಷ್ಟ್ರಮಟ್ಟದ ಸ್ಕೇಟಿಂಗ್: ರಾಜ್ಯಕ್ಕೆ 3ನೇ ಸ್ಥಾನ ಮುದ್ದೇಬಿಹಾಳದ 'ಏಕಲವ್ಯ ಅಕಾಡೆಮಿ' ಸಾಧನೆ




ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಮಹಾರಾಷ್ಟ್ರದ ಸೋಲಾಪುರದಲ್ಲಿ ನಡೆದ 8ನೇ ರಾಷ್ಟ್ರಮಟ್ಟದ ರೋಲರ್ ಸ್ಕೇಟಿಂಗ್ ಪಂದ್ಯಾವಳಿಯಲ್ಲಿ ಮುದ್ದೇಬಿಹಾಳದ 'ಏಕಲವ್ಯ ರೋಲರ್ಸ್ ಸ್ಕೇಟಿಂಗ್ ಅಕಾಡೆಮಿ'ಯ ಕ್ರೀಡಾಪಟುಗಳು ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಗೆದ್ದು, ರಾಜ್ಯಕ್ಕೆ ಒಟ್ಟಾರೆ ತೃತೀಯ ಸ್ಥಾನ ತಂದುಕೊಟ್ಟಿದ್ದಾರೆ.**

ಅಕಾಡೆಮಿಯ ಸಂಸ್ಥಾಪಕ ಶಿವಕುಮಾರ ಶಾರದಳ್ಳಿ ಮಾಹಿತಿ ನೀಡಿ, "ನಮ್ಮ ತಾಲೂಕಿನಿಂದ ಪಾಲ್ಗೊಂಡಿದ್ದ ಎಲ್ಲಾ 12 ವಿದ್ಯಾರ್ಥಿಗಳು ವೈಯಕ್ತಿಕ ಪದಕಗಳೊಂದಿಗೆ ಅತಿ ಹೆಚ್ಚು ಅಂಕ ಗಳಿಸಿ, ತಾಲೂಕಿನ ಕೀರ್ತಿ ಹೆಚ್ಚಿಸಿದ್ದಾರೆ" ಎಂದು ತಿಳಿಸಿದರು. ವಿಜೇತ ಮಕ್ಕಳಿಗೆ ಫೆಡರೇಷನ್‌ನ ರಾಷ್ಟ್ರೀಯ ಹಾಗೂ ರಾಜ್ಯ ಪದಾಧಿಕಾರಿಗಳು ಪದಕ ಮತ್ತು ಟ್ರೋಫಿ ವಿತರಿಸಿ ಅಭಿನಂದಿಸಿದರು. ?ವಿಜೇತರ ವಿವರ: ?ವಿಕ್ರಾಂತ್ ಶಾರದಳ್ಳಿ: 10 ವರ್ಷದೊಳಗಿನ ಇನ್‌ಲೈನ್ ವಿಭಾಗದಲ್ಲಿ ಚಿನ್ನ. ?ಶಾಹೀದಾ ಅಕ್ಕಲಕೋಟ: 10 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಚಿನ್ನ.

ಮಹ್ಮದಾಹಿಲ್ ಅಕ್ಕಲಕೋಟ: 12 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಚಿನ್ನ. ?ವೈಭವ್ ಬಿರಾದಾರ್: 10 ವರ್ಷದೊಳಗಿನ ಇನ್‌ಲೈನ್ ವಿಭಾಗದಲ್ಲಿ ಬೆಳ್ಳಿ. ಶಕುಂತಲಾ ಶಾರದಳ್ಳಿ: 15 ವರ್ಷದೊಳಗಿನ ಇನ್‌ಲೈನ್ ವಿಭಾಗದಲ್ಲಿ ಬೆಳ್ಳಿ. ?ಹೃದಯಾನಂದ ಕೊಪ್ಪ: 15 ವರ್ಷದೊಳಗಿನ ಕ್ವಾಡ್ ವಿಭಾಗದಲ್ಲಿ ಬೆಳ್ಳಿ ಮತ್ತು ಕಂಚು. ?ನಾಗಶ್ರುತನ ಇಲ್ಲೂರ: 12 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಬೆಳ್ಳಿ. ?ಅಕೀಲ್ ಅಸ್ಕಿ: 12 ವರ್ಷದೊಳಗಿನ ಇನ್‌ಲೈನ್ ವಿಭಾಗದಲ್ಲಿ ಕಂಚು. ?ಯುಸುಫ್ ಚಿಮ್ಮಲಗಿ: 10 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಕಂಚು. ?ಅಭಯ್ ದೇವಾಡಗಿ: 12 ವರ್ಷದೊಳಗಿನ ರಿಕ್ರಿಯೇಷನ್ ವಿಭಾಗದಲ್ಲಿ ಕಂಚು, ಮಕ್ಕಳ ಈ ಸಾಧನೆಗೆ ಪಾಲಕರಾದ ನಂದು ಅಸ್ಕಿ, ರಾಚೋಟಿ ಬಳಿಗಾರ್, ಮಹ್ಮದಶಫೀಕ್ ಅಕ್ಕಲಕೋಟ, ಉಮಾಕಾಂತ್ ರುದ್ರವಾರ್, ಮೊಸೀನ್ ಚಿಮ್ಮಲಗಿ ಪ್ರೋತ್ಸಾಹಿಸಿದ್ದಾರೆ. ಕ್ರೀಡಾಪಟುಗಳ ಸಾಧನೆಗೆ ತಾಲೂಕಿನಾದ್ಯಂತ ಶ್ಲಾಘನೆ ವ್ಯಕ್ತವಾಗಿದೆ.

## ಕೌಶಲ್ಯಯುತ ಮಾನವ ಸಂಪನ್ಮೂಲಕ್ಕೆ ಹೆಚ್ಚಿದ ಬೇಡಿಕೆ: ಅಪ್ರೆಂಟಿಸ್‌ಶಿಪ್‌ಗೆ ಆದ್ಯತೆ ನೀಡಿ: ಗವಿಶಂಕರ್ ಕೆ.

ಅ.ಶ. ಸುದ್ದಿ ಕುಷ್ಟಗಿ

**ಕುಷ್ಟಗಿ: ಪ್ರಸ್ತುತ ಕೈಗಾರಿಕಾ ಕ್ಷೇತ್ರದಲ್ಲಿ ಕೌಶಲ್ಯಯುತ ಮಾನವ ಸಂಪನ್ಮೂಲಕ್ಕೆ ಹೆಚ್ಚಿನ ಬೇಡಿಕೆಯಿದ್ದು, ಐಟಿಐ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣದ ಜೊತೆಗೆ ಅಪ್ರೆಂಟಿಸ್‌ಶಿಪ್ ತರಬೇತಿ ಪೂರ್ಣಗೊಳಿಸಿದರೆ ಉತ್ತಮ ಉದ್ಯೋಗಾವಕಾಶಗಳು ದೊರೆಯುತ್ತವೆ ಎಂದು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಉಪನಿರ್ದೇಶಕ (ಪ್ರಾಚಾರ್ಯರು ಗ್ರೇಡ್–1) ಗವಿಶಂಕರ್ ಕೆ. ಹೇಳಿದರು.**



ಪಟ್ಟಣದ ಸಜ್ಜಲ ಶ್ರೀ ಕೈಗಾರಿಕಾ ತರಬೇತಿ ಸಂಸ್ಥೆ ಹಾಗೂ ಹನುಮನಾಳ ಸರ್. ಎಂ. ವಿಶ್ವೇಶ್ವರಯ್ಯ ಐಟಿಐ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ, ಉಪನಿರ್ದೇಶಕ (ಪ್ರಾಚಾರ್ಯರು ಗ್ರೇಡ್–1) ಹುದ್ದೆಗೆ ಪದೋನ್ನತಿ ಹೊಂದಿದ ಹಿನ್ನೆಲೆಯಲ್ಲಿ ಅವರಿಗೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಐಟಿಐ ಶಿಕ್ಷಣವು ಕೇವಲ ಪಠ್ಯಾಧಾ–ರಿತ ಜ್ಞಾನಕ್ಕೆ ಸೀಮಿತವಾಗದೆ, ವಿವಿಧ ವೃತ್ತಿಗಳಿಗೆ ಅಗತ್ಯವಿರುವ ತಾಂತ್ರಿಕ ಕೌಶಲ್ಯಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಎಲೆಕ್ಟ್ರಿಷಿಯನ್, ಫಿಟ್ಟರ್ ಸೇರಿದಂತೆ ವಿವಿಧ ಟ್ರೇಡ್‌ಗಳಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳು ಕೈಗಾರಿಕೆಗಳ ಅಗತ್ಯಗಳಿಗೆ ಅನುಗುಣವಾಗಿ ಸಿದ್ಧರಾಗುತ್ತಾರೆ ಎಂದು ತಿಳಿಸಿದರು. ಸಜ್ಜಲ ಶ್ರೀ ಐಟಿಐ ಕಾಲೇಜಿನ ಪ್ರಾಚಾರ್ಯ ಶ್ರೀಕಾಂತ ಶೇಖರಯ್ಯ ಸರಗಣಾಚಾರಿ ಮಾತನಾಡಿ, ಐಟಿಐ ಶಿಕ್ಷಣದಲ್ಲಿ ಕಾರ್ಯಾಗಾರ (ವರ್ಕ್‌ಶಾಪ್) ಆಧಾ–ರಿತ ಪ್ರಾಯೋಗಿಕ ತರಬೇತಿಗೆ ಹೆಚ್ಚಿನ ಮಹತ್ವವಿದೆ.

ವಿದ್ಯಾರ್ಥಿಗಳು ಯಂತ್ರೋಪಕರಣಗಳ ಬಳಕೆ, ತಾಂತ್ರಿಕ ವಿಧಾನಗಳು, ಸುರಕ್ಷತಾ ಕ್ರಮಗಳು ಹಾಗೂ ಉದ್ಯೋಗ ಕ್ಷೇತ್ರಕ್ಕೆ ಅಗತ್ಯವಾದ ಕೌಶಲ್ಯಗಳನ್ನು ಪ್ರಾಯೋಗಿಕವಾಗಿ ಕಲಿಯಲು ಇದು ಸಹಕಾರಿಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಹನುಮನಾಳ ಸರ್. ಎಂ. ವಿಶ್ವೇಶ್ವರಯ್ಯ ಐಟಿಐ ಕಾಲೇಜಿನ ಪ್ರಾಚಾರ್ಯ ವಿರಪ್ಪ ಸಂಗಮದ, ದ್ಯಾಮಣ್ಣ ನಾಯಕ, ರಂಗಪ್ಪ, ಪ್ರವೀಣ ಚಿಕ್ಕನವರೆ, ಈಶಪ್ಪ, ವೀರೇಶ್ ಸರಗಣಾಚಾರಿ ಸೇರಿದಂತೆ ಹಲವರು ಉಪಸ್ಥಿತ–ರಿದ್ದರು. ಇದೇ ಸಂದರ್ಭದಲ್ಲಿ ಗವಿಶಂಕರ್ ಕೆ. ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

# ನಿಂಗೋಜಿಯವರ ಶೈಕ್ಷಣಿಕ ವಿಚಾರಗಳ ಕೊಡುಗೆ ಅಪಾರ : ಪ್ರೊ.ಬಿ.ಎ.ಕೆಂಚರೆಡ್ಡಿ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ವಿದ್ಯಾರ್ಥಿಗಳ ಜೀವನವನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ, ಶಿಕ್ಷಕರು ಸರಳ ಜೀವನದೊಂದಿಗೆ ಉದಾತ್ತ ವಿಚಾರವನ್ನು ಹೊಂದಿರಬೇಕಾಗಿರುತ್ತದೆ ಆ ಎಲ್ಲಾ ಗುಣಗಳನ್ನು ಶಿಕ್ಷಕರಾದ ಅನ್ನದಾನಪ್ಪ ನಿಂಗೋಜಿ ರವರು ಅಳವಡಿಸಿಕೊಂಡಿದ್ದರು ಎಂದು ಗಜೇಂದ್ರಗಡದ ನಿವೃತ್ತ ಉಪನ್ಯಾಸಕರು ಹಾಗೂ ಚಿಂತಕರಾದ ಪ್ರೊ.ಬಿ.ಎ ಕೆಂಚರೆಡ್ಡಿರವರು ಹೇಳಿದರು.**



ಪಟ್ಟಣದ ಎಸ್. ಎ. ನಿಂಗೋಜಿ ಬಿ. ಎಡ್. ಕಾಲೇಜನಲ್ಲಿ ಶಿಕ್ಷಕರಾದ ಅನ್ನದಾನಪ್ಪ ನಿಂಗೋಜಿ ರವರ 17 ನೇ ವರ್ಷದ ಪುಣ್ಯ ತಿಥಿ ಕಾರ್ಯಕ್ರಮ ವನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದ ಅವರು ಅನ್ನದಾನಪ್ಪ ನವರು ಶಿಕ್ಷಕರಾಗಿದ್ದರು ಸಹ ಸಾಮಾಜಿಕ ಕಾಳಜಿ ಪ್ರಗತಿಪರ ವಿಚಾರಗಳು ಅವರ ಸಾಹಿತ್ಯದಲ್ಲಿ ಢಾಳವಾಗಿ ಕಾಣುತ್ತವೆ ಎಂದರು. ಪ್ರಕಟಿತ ಅವರ ನಾಲ್ಕು ಕಾವ್ಯದಲ್ಲಿ ಬಂಡಾಯವು ರಾರಾಜಿಸಿದೆ ಅವರ ಸಮಗ್ರ ಸಾಹಿತ್ಯದ ಬಗ್ಗೆ ಸಂಶೋಧನೆ ಯ ಅಗತ್ಯತೆ ಇದೆ ಎಂದು ಪ್ರತಿ ಪಾದಿಸಿದರು.

ಅವರ ನಿಸ್ವಾರ್ಥ ಸೇವೆಯ ಫಲವಾಗಿ ನಿಂಗೋಜಿ ಕುಟುಂಬದವರು ನಮ್ಮ ಭಾಗದಲ್ಲಿ ಶಿಕ್ಷಣ ಸಾಮ್ರಾಜ್ಯ ವನ್ನೆ ಸೃಷ್ಟಿಸಿದ್ದಾರೆ ಎಂದರೆ ತಪ್ಪಾಗಲಿಕ್ಕಿಲ್ಲ ಎಂದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೀರಪ್ಪ ನಿಂಗೋಜಿ ಮಾತನಾಡಿ ಅನ್ನದಾನಪ್ಪ ನಿಂಗೋಜಿ ರವರ ಸಮಗ್ರ ಸಾಹಿತ್ಯ ಹಾಗೂ ಅವರ ಜೀವನ ಚರಿತ್ರೆ ಬಗ್ಗೆ ಕೊಡಗು ಜಿಲ್ಲಾದ ಸಾಹಿತಿಗಳಾದ ಡಾ. ಸೋಮಣ್ಣ ಮತ್ತು ಭರಮಣ್ಣ ಬೆಟಗೇರಿ ರವರು ಅಲ್ಲಿನ ಹಲವಾರು ಶಾಲಾ ಕಾಲೇಜುಗಳಲ್ಲಿ ವಿಚಾರಗೋಷ್ಠಿ ಗಳನ್ನು ಏರ್ಪಡಿಸದ್ದನ್ನು ನೋಡಿದರೆ ಅವರ ವ್ಯಕ್ತಿತ್ವ ಎಂಥಹದು ಎಂದು ಗುರಿತಿಸಬಹುದು ಎಂದರು. ಅಲ್ಲದೆ ಅನ್ನದಾನಪ್ಪ ನವರ ನುಡಿ ಮುತ್ತು "ವಿದ್ಯಾ ಮಂದಿರವೇ ದೇವಾಲಯ ವಿದ್ಯಾರ್ಥಿಗಳೇ ದೇವರು " ಎನ್ನುವ ನುಡಿಗಟ್ಟನ್ನು ತಮ್ಮ ಕಾಲೇಜಲ್ಲಿ ಬರೆಸಿ ಹಾಕಿದ್ದಾರೆ ಎಂದು ಸ್ಮರಿಸಿದರು.

ಮೈಸೂರ ಜಿಲ್ಲಾದ ಬೆಟ್ಟದಪುರ ಅನಿಕೇತನ ಕಾಲೇಜು ವಿದ್ಯಾರ್ಥಿ ಶ್ರಾವ್ಯ ಎಂಬ ವಿದ್ಯಾರ್ಥಿ ಅನ್ನದಾನಪ್ಪ ನಿಂಗೋಜಿ ರವರ ಬಗ್ಗೆ ಬರೆದು ಕಳುಹಿಸಿದ ಲೇಖನ ವನ್ನು ಸಾದರ ಪಡೆಸಲಾಯಿತು. ಉಪನ್ಯಾಸಕರಾದ ವಿ. ಬಿ. ನಿಡಶೇಸಿ, ಜಿ.ಪ.ಮಾಜಿ ಸದಸ್ಯೆ ಶಕುಂತಲಾ ಪಾಟೀಲ, ವಿರೂಪಾಕ್ಷಪ್ಪ ಉಳ್ಳಾಗಡ್ಡಿ, ಇನ್ನಿತರರು ಅನ್ನದಾನಪ್ಪ ನಿಂಗೋಜಿರವರ ಹಲವಾರು ವಿಚಾರಗಳನ್ನು ಪ್ರಸ್ತಾಪಿಸುತ್ತಾ ನಿಂಗೋಜಿ ಕುಟುಂಬ ಎಲ್ಲಾ ರಂಗಗಳಲ್ಲಿ ಸೇವೆ ಸಲ್ಲಿಸುತ್ತಾ ಬಂದಿದೆ ಎಂದು ಅಭಿಮಾನ ವ್ಯಕ್ತ ಪಡಿಸಿದರು.

ಈ ಸಂದರ್ಭದಲ್ಲಿ ಡಾ. ಕಾಶಯ್ಯ ನಂದಿಕೋಲ, ಎಮ್.ಎಫ್. ನದಾಫ್, ಕಲ್ಲನಗೌಡ ಪಾಟೀಲ, ಎಮ್.ವಿ. ಪಾಟೀಲ, ಎಸ್. ಎ. ನಿಂಗೋಜಿ,ಸದಾಶಿವರಾಜ್ ಮಠದ,ರಾಜು ನಿಂಗೋಜಿ, ರವಿ ನಿಂಗೋಜಿ, ಎಮ್. ಡಿ. ಅಲಿ, ಇನ್ನಿತರರು ವೇದಿಕೆ ಮೇಲೆ ಉಪಸ್ಥಿತರಿದ್ದರು ರತ್ನಮ್ಮ ನಿಂಗೋಜಿ ಅಧ್ಯಕ್ಷತೆ ವಹಿಸಿದ್ದರು. ವೀರಣ್ಣ ವಾಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಉಮೇಶ ಕುಕನೂರ ಹಾಗೂ ವಿದ್ಯಾರ್ಥಿಗಳು ಪ್ರಾರ್ಥಿಸಿದರು, ಶಿಕ್ಷಕ ಪ್ರಶಾಂತ ಸದರಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಲೇಖಕರ ದಿನಚರಿ...

## ಗಾತ್ರದಲಿ ವಾಮನ, ಅರ್ಥದಲಿ ತ್ರಿವಿಕ್ರಮ

**ಪೌರಾಣಿಕ ಹಿನ್ನೆಲೆಯಲ್ಲಿ ಮಹಾವಿಷ್ಣುವಿನ ವಾಮನಾವತಾರದ ಕುರಿತು ನಾವೆಲ್ಲರೂ ಕೇಳಿರುವ ಕಥೆ. ಇಲ್ಲಿ ಬರುವ ವಾಮನ ಪಾತ್ರವು ಕುಬ್ಜ ರೂಪದ ಬ್ರಾಹ್ಮಣನಾಗಿ ಬಂದು, ಬಲಿಚಕ್ರವರ್ತಿಯ ಎದುರು ಬೃಹದಾಕಾರದ ತ್ರಿವಿಕ್ರಮನಾಗಿ ಬೆಳೆದು ನಿಲ್ಲುವ ಹಾಗೆ ಚುಟುಕು ಅಥವಾ ಹನಿಗವಿತೆಗಳ ಸ್ವರೂಪವೂ ಹೊಂದಿದೆ. ಅವು ಗಾತ್ರದಲ್ಲಿ 'ವಾಮನ'ನಂತಿದ್ದರೂ, ಅರ್ಥದ ಆಳ, ಹರವು ಹಾಗೂ ವಿಸ್ತಾರದಲ್ಲಿ 'ತ್ರಿವಿಕ್ರಮ'ನಂತೆ ಅಗಾಧತೆಯನ್ನು ಹೊಂದಿರುತ್ತವೆ.**

ಕೇವಲ ಮೂರು-ನಾಲ್ಕು ಸಾಲುಗಳಲ್ಲಿ ಉದಿಸುವ ಈ ಭಾವಬಿಂದುಗಳು ಟೀಕೆ, ವ್ಯಂಗ್ಯ, ವಿಡಂಬನೆ, ಹಾಸ್ಯ ಮತ್ತು ಪ್ರಾಸಪದಗಳಿಂದ ಕೂಡಿರುತ್ತವೆ. ಇಂತಹ ಸುಂದರ ಬರಹಗಳನ್ನು ಅವಲೋಕಿಸಿದಾಗ ಕಡಲನ್ನು ಕುಡಿಕೆಯಲ್ಲಿ ತುಂಬಿಸಿದಂತೆ ಭಾಸವಾಗುತ್ತದೆ. ಕನ್ನಡ ಸಾಹಿತ್ಯ ಲೋಕದಲ್ಲಿ 'ಚುಟುಕುಗಳ ಬ್ರಹ್ಮ' ಎಂದೇ ಖ್ಯಾತರಾದ ದಿನಕರ ದೇಸಾಯಿ, ದುಂಡಿರಾಜ, ಜಿ. ಪಿ. ರಾಜರತ್ನಂ ರಂತಹ ಪ್ರಮುಖ ಕವಿಗಳನ್ನು ಸ್ಮರಿಸುವಾಗಲೇ, ಅದೇ ಸಾಲಿನಲ್ಲಿ ನಿಲ್ಲುವಂತಹ ಮತ್ತೊಂದು ಪ್ರಮುಖ ಹೆಸರು ಯಾದಗಿರಿ ಜಿಲ್ಲೆಯ ಉಪನ್ಯಾಸಕರಾದ ಕವಿಗಳು ಗುರುಪ್ರಸಾದ್ ವೈದ್ಯ ಅವರ ಬರವಣಿಗೆಯು ವೈಚಾರಿಕ ದಿವಾಳಿತನಕ್ಕೆ ಹಿಡಿದ ಕನ್ನಡಿಯಂತೆ ಸಮಕಾಲೀನ ಸಮಾಜವು ಭೌತಿಕವಾಗಿ ತಂತ್ರಜ್ಞಾನದ ಪ್ರಗತಿ ಹೊಂದುತ್ತಿದ್ದರೂ, ಆಂತರಿಕವಾಗಿ ತೀವ್ರ ನೈತಿಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಗುರುಪ್ರಸಾದವರ ಚುಟುಕುಗಳು ಕೇವಲ ಸಾಹಿತ್ಯಿಕ ಸಾಲುಗಳಲ್ಲ.




ಇವು ಇಂದಿನ ಜಾಗತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜಡತ್ವವನ್ನು ವಿಭಜಿಸಿ ನೋಡುವ ಅತ್ಯಂತ ತೀಕ್ಷ್ಣವಾದ ವೈಚಾರಿಕ ಅಭಿವ್ಯಕ್ತಿಗಳಾಗಿವೆ. ನಾನು ಇಲ್ಲಿ ಕೆಲ ಚುಟುಕುಗಳ ಆಶಯಗಳನ್ನು ಅವಲೋಕಿಸುವೆ. ವಾಸ್ತವ ವಿಶ್ವ ನಾಯಕರು ಬುದ್ಧನ ಮುಂದೆ ಕೈಮುಗಿದು ನಿಂತಾಗ ಬುದ್ದನೆದ್ದು ಕೇಳಿದ ಏನಾಗಿದೆ, ಇವರೆಂದರು ಯುದ್ಧ ಮಾಡಿದ್ದೇವೆ ಬುದ್ದನೆಂದ ಮುಂದೆ? ಹೆಣಗಳ ಹೂಳಲು ಭೂಮಿಯಲ್ಲಿ ಜಾಗವಿಲ್ಲ, ಅರಿವು ನಿಮ್ಮಲ್ಲೇ ಇದೆ ಎಂದು ಬುದ್ಧ,, ಮತ್ತೆ ಮಲಗಿದ ಶಾಂತಿಯ ಬೂಟಾಟಿಕೆ ಮತ್ತು ಜಾಗತಿಕ ಕ್ರೌರ್ಯ ಇಂದಿನ ಜಾಗತಿಕ ರಾಜಕಾರಣದ ದ್ವಂದ್ವವನ್ನು ಅತ್ಯಂತ ಗಂಭೀರವಾಗಿ ಪ್ರಶ್ನಿಸುತ್ತದೆ.

ವಿಶ್ವನಾಯಕರು ಶಾಂತಿಯ ಸಂಕೇತವಾದ ಬುದ್ಧನ ಮೂರ್ತಿಯ ಮುಂದೆ ತಲೆಬಾಗುವುದು ಇಂದಿನ 'ಡಿಪ್ಲೊಮಸಿ'ಯ (ರಾಜತಾಂತ್ರಿಕತೆಯ) ಪರಮಾವಧಿ. ಜಗತ್ತು ಶಾಂತಿಯ ಸೋಗಲಾಡಿತನವನ್ನು ಪ್ರದರ್ಶಿಸುತ್ತಲೇ, ಬೆನ್ನಹಿಂದೆ ಮಹಾಯುದ್ಧಗಳ ಹೆಣದ ರಾಶಿಯನ್ನು ಸೃಷ್ಟಿಸುತ್ತಿದೆ. "ಹೆಣಗಳನ್ನು ಹೂಳಲು ಭೂಮಿಯಲ್ಲಿ ಜಾಗವಿಲ್ಲ, ಅರಿವು ನಿಮ್ಮಲ್ಲೇ ಇದೆ" ಎಂದು ಬುದ್ಧ ಮತ್ತೆ ಮಲಗುವ ನಡೆ ಕೇವಲ ಉಪದೇಶಗಳಿಂದ ಮನುಷ್ಯನ ಕ್ರೌರ್ಯವನ್ನು ತಿದ್ದಲಾಗದು ಎಂಬ ತಾತ್ವಿಕ ಹತಾಶೆ ಹಾಗೂ ಸ್ವಯಂ-ವಿವೇಕದ ಅನಿವಾರ್ಯತೆಯನ್ನು ಸಾರುತ್ತದೆ. ಬುದ್ಧನ ಈ ಮೌನವು ಜಗತ್ತಿನ ಕಪಟತನಕ್ಕೆ ನೀಡಿದ ಅತ್ಯಂತ ಪ್ರಬಲ ಪ್ರತ್ಯುತ್ತರವಾಗಿದೆ. **ಸಂದರ್ಭ** ಅವರು ಇವರೆಲ್ಲರೂ ಒಂದಾಗಿ ಅಂಬೇಡ್ಕರರನ್ನು ಆಹ್ವಾನಿಸಲು ಹೋದರು ಪುಸ್ತಕ ಓದುವುದನ್ನು ನಿಲ್ಲಿಸಿ ಯಾವ ಕಾರ್ಯಕ್ರಮ ಎಂದು ಕೇಳಿದರು ಅಂಬೇಡ್ಕರ್ ನಿಮ್ಮದೇ ಮೂರ್ತಿ ಪ್ರತಿಷ್ಠಾಪನೆ ಎಂದರು ನಾನು ಮೂರ್ತಿಗಳಲ್ಲಿಲ್ಲ ತಾವು ಹೊರಡಬಹುದು ಎಂದರು ಅಂಬೇಡ್ಕರ್ ವ್ಯಕ್ತಿಯ ಆರಾಧನೆ ಮತ್ತು ಸೈದ್ಧಾಂತಿಕ ಹತ್ಯೆಯು ಈ ಚುಟುಕಾಗಿದೆ ಜ್ಞಾನದ ಸಂಕೇತವಾದ ಡಾ. ಬಿ. ಆರ್. ಅಂಬೇಡ್ಕರ್ ಅವರ ತಾತ್ವಿಕತೆಯ ಸುತ್ತ ಆವರಿಸಿರುವ ಆಧುನಿಕ ಮೌಢ್ಯವನ್ನು ಅನಾವರಣಗೊಳಿಸುತ್ತದೆ.

ಅಂಬೇಡ್ಕರ್ ಅವರು ಸದಾ ಪುಸ್ತಕ ಓದುವಿಕೆಯಲ್ಲಿ (ಜ್ಞಾನಾರ್ಜನೆಯಲ್ಲಿ) ತೊಡಗಿದ್ದವರು. ಆದರೆ ಇಂದಿನ ಸಮಾಜ ಅವರನ್ನು ಕೇವಲ ಒಂದು ಜಡ 'ಮೂರ್ತಿ'ಯನ್ನಾಗಿ ಪರಿವರ್ತಿಸಿ, ಉತ್ಸವಗಳನ್ನು ಆಚರಿಸುತ್ತಾ ಸಂಭ್ರಮಿಸಲು ಹೊರಟಿದೆ. "ನಾನು ಮೂರ್ತಿಗಳಲ್ಲಿಲ್ಲ, ತಾವು ಹೊರಡಬಹುದು" ಎಂಬ ಕವಿಯ ಕಲ್ಪನೆಯ ಅಂಬೇಡ್ಕರ್ ಅವರ ನುಡಿ, ಇಂದಿನ ಪ್ರದರ್ಶನಾತ್ಮಕ ಸಾಂಸ್ಕೃತಿಕ ರಾಜಕಾರಣಕ್ಕೆ ಬಿದ್ದ ಸೈದ್ಧಾಂತಿಕ ಚಾಟಿ ಏಟಾಗಿದೆ. ಮಹಾಪುರುಷರ ಆಶಯಗಳನ್ನು ಕೊಂದು, ಅವರನ್ನು ಕೇವಲ ಮತಬ್ಯಾಂಕ್ ಮತ್ತು ಉತ್ಸವಗಳ ವಿಗ್ರಹವನ್ನಾಗಿಸುವ ಸಮಾಜದ ಕುತಂತ್ರವನ್ನು ಇದು ಬೆತ್ತಲೆಗೊಳಿಸುತ್ತದೆ. **ಬದಲಾವಣೆ** ಪಾದಯಾತ್ರೆ ಮಹಾ ಯಾತ್ರೆ ಎಂದು ಸಿದ್ಧರಾದರು ಖಾಲಿ ಆದವು ವಿಭೂತಿ ಉಂಡಿಗಳು ಸುದ್ದಿಯಾಗಬೇಕೆಂದು ಎದ್ದು ಕುಳಿತವು ಮಾಧ್ಯಮಗಳು ಮಾರ್ಗ ಎತ್ತ ಗೂಗಲ್ ಹೇಳಿದತ್ತ ಇಂಥವರು ಬರುವವರೆಂದು ಅಲ್ಲೊಬ್ಬ ಕುಳಿತಿದ್ದ ಎಲ್ಲರಿಗೂ ಕೇಳುವಂತೆ ಕೂಡಲಸಂಗಮ ಮುಳುಗಡೆಯಾಗಿದೆ ಎಂದು ಕೂಗುತ್ತಿದ್ದ ಈ ಮೇಲಿನ ಸಾಲುಗಳು ತಂತ್ರಜ್ಞಾನದ ಅಬ್ಬರ ಮತ್ತು ಇತಿಹಾಸದ ಮರೆವಿನ ಕಾಲಘಟ್ಟದಲಿ ಯುಗದ ಡಾಂಬಿಕ ಭಕ್ತಿ ಮತ್ತು ನಮ್ಮ ಸಾಂಸ್ಕೃತಿಕ ಬೇರುಗಳ ನಾಶದ ಆತಂಕವನ್ನು ವೆಕ್ತಪಡಿಸುತ್ತದೆ.

ಇಂದಿನ ಯಾತ್ರೆಗಳು ಆತ್ಮಶುದ್ಧಿಗಾಗಿ ನಡೆಯುತ್ತಿಲ್ಲ, ಬದಲಿಗೆ ಅವು ಮಾಧ್ಯಮಗಳ ಟಿ.ಆರ್.ಪಿ ಮತ್ತು ಗೂಗಲ್ ಮ್ಯಾಪ್ ನಿರ್ದೇಶಿಸುವ ಯಾಂತ್ರಿಕ ನಡಿಗೆಗಳಾಗಿವೆ. ಈ ಆಡಂಬರದ ನಡುವೆ, "ಕೂಡಲಸಂಗಮ ಮುಳುಗಡೆಯಾಗಿದೆ" ಎಂದು ಕೂಗುವ ಧ್ವನಿ ಕವಿತೆಯ ಪರಮೋಚ್ಚ ಘಟ್ಟವಾಗಿದೆ. ಬಸವಣ್ಣನವರ ಕ್ರಾಂತಿಯ ಮತ್ತು ವೈಚಾರಿಕತೆಯ ನೆಲೆ 'ಕೂಡಲಸಂಗಮ' ಇಂದು ಕೇವಲ ಭೌಗೋಳಿಕವಾಗಿ ಮಾತ್ರವಲ್ಲ, ಜಾಗತೀಕರಣ ಮತ್ತು ಆಧುನಿಕತೆಯ ಅಬ್ಬರದಲ್ಲಿ ಸೈದ್ಧಾಂತಿಕವಾಗಿಯೂ ಮುಳುಗಿ ಹೋಗುತ್ತಿದೆ ಎಂಬುದು ಕವಿಯ ತಲ್ಲಣವಾಗಿದೆ.

ಗುರುಪ್ರಸಾದ್ ವೈದ್ಯ ಅವರ ಈ ಮೂರೂ ಚುಟುಕುಗಳು ಆಂತರಿಕವಾಗಿ ಒಂದಕ್ಕೊಂದು ಬೆಸೆದುಕೊಂಡಿವೆ. ಜಾಗತಿಕ ಮಟ್ಟದ ಯುದ್ಧೋನ್ಮಾದ (ಬುದ್ಧ), ಸಾಮಾಜಿಕ ಮಟ್ಟದ ವೈಚಾರಿಕ ದಿವಾಳಿತನ (ಅಂಬೇಡ್ಕರ್) ಮತ್ತು ಪ್ರಾದೇಶಿಕ ಮಟ್ಟದ ಸಾಂಸ್ಕೃತಿಕ ಮರೆವು (ಬಸವಣ್ಣ) ಈ ಮೂರೂ ಬಿಕ್ಕಟ್ಟುಗಳನ್ನು ಒಟ್ಟಿಗೆ ಇಟ್ಟು ನೋಡುವಲ್ಲಿ ಕವಿ ಯಶಸ್ವಿಯಾಗಿದ್ದಾರೆ. ಕಾವ್ಯದ ಇಂತಹ ಪ್ರಬುದ್ಧ ಹಾಗೂ ಗಂಭೀರ ಹೆಜ್ಜೆಗಳು ಇಂದಿನ ತಲೆಮಾರಿನ ಜಡತ್ವವನ್ನು ಬಡಿದೆಬ್ಬಿಸುವಲ್ಲಿ ಅತ್ಯಂತ ಪ್ರಸ್ತುತವಾಗಿವೆ.

ಪಾರ್ವತಿ ಎಸ್. ಬೂದೂರು

## ತ್ಯಾಗದ ಪ್ರತೀಕ 'ಅಪ್ಪಾ' ಮಹಾವೃಕ್ಷ



ಹೆಗಲ ಮೇಲೆ ನಮ್ಮನ್ನು ಹೊತ್ತು
ಜಗತ್ತನ್ನು ತೋರಿಸಿದಾತ,
ತನ್ನ ಹೆಗಲ ಮೇಲಿನ ಭಾರವನ್ನು
ಯಾರಿಗೂ ತೋರಿಸದಾತ.

ತನ್ನ ಹರಿದ ಚಪ್ಪಲಿಯನ್ನು
ಎಂದೂ ಲೆಕ್ಕಿಸದ ಜೀವ,
ನಮಗೆ ಹೊಸ ಬಟ್ಟೆ ಕೊಡಿಸಲು
ಹಗಲಿರುಳು ದುಡಿಯುವ ದೇವ.

ಹೊಟ್ಟೆ ಹಸಿದರೂ
ಮುಖದಲ್ಲಿ ನಗು ಸೂಸುತ್ತಾ,
ನಮ್ಮ ತುತ್ತಿಗಾಗಿ ತನ್ನ ರಕ್ತವನ್ನೇ
ಬೆವರಾಗಿ ಸುರಿಸುವಾತ.

ನೆರಿಗೆ ಮೂಡಿದ ಕೈಗಳಲ್ಲಿ
ಅಡಗಿದೆ ಕೋಟಿ ಹರಕೆ,
ಅವರ ದಣಿದ ಕಣ್ಣುಗಳಲ್ಲಿ ನಮಗಾಗಿ
ನೂರು ಕನಸುಗಳ ಪೂರೈಕೆ.

ಕೋಪದ ಮುಖವಾಡದ ಹಿಂದೆ
ಅಡಗಿದೆ ಕರುಣೆಯ ಸಾಗರ,
ಅಪ್ಪನ ಕಟ್ಟುನಿಟ್ಟಿನ ಮಾತಿನಲ್ಲೇ ಇದೆ
ನಮ್ಮ ಬದುಕಿನ ಬಂಗಾರ.

ನಮಗಾಗಿ ತನ್ನ ಆಸೆ
ಆಕಾಂಕ್ಷೆಗಳನ್ನೆಲ್ಲಾ ಮರೆತು,
ನಮ್ಮ ಯಶಸ್ಸನ್ನೇ ತನ್ನ ಬದುಕಿನ
ಏಕೈಕ ಗುರಿಯಾಗಿಸಿಕೊಂಡು,
ಯಾರಿಗೂ ತಿಳಿಯದಂತೆ ಒಂಟಿಯಾಗಿ
ಕರಗುವ ಮೇಣದಬತ್ತಿ ಅಪ್ಪ.

ಬಯಸುವುದಿಲ್ಲ ಅವರು ಎಂದೂ
ನಮ್ಮಿಂದ ದೊಡ್ಡ ಉಡುಗೊರೆ,
ನಾವು ಕೊಡುವ ಒಂದು ಸಣ್ಣ ಪ್ರೀತಿಯ
ನಗುವೇ ಅವರಿಗೆ ಆಸ್ತಿ.



ಅನಿತಾ ಪರಮೇಶ್ವರ್,
ನಂದಿಹಕ್ಲು ಹೊಸನಗರ.

## ಬಣ ಬಣ


ಮುಗಿಲ ಮಾರುತ ಜಾರುತಿದೆ
ಬಿಡಿಗಾಳಿಯ ನೆತ್ತರು ಬಸಿದು
ನೆಲ ಬಿರಿದು ದಿಗಿಲು
ಬಣ ಗುಡುತಿದೆ ಒಕ್ಕಲು

ಆಹಾಕಾರದ ಬೇಗೆ
ದಿಕ್ಕು ತೋಚದ ಮಡಿಲು
ಬಿಕ್ಕುತಿದೆ ಸೊರಗಿ
ಕೊರಗುತಿಹ ಮಣ್ಣಿನ ಮಗ.

ತಾಪಮಾನದ ಏರಿಕೆ
ವಾಡಿಕೆ ಮಳೆ ಗರಿಕೆ
ಒಕ್ಕಲೆದಿದ್ದಿದೆ ಕುಟೀರ
ಗುಳೇ ಹೊರಟವರ ಗೋಳು ಕೇಳುವವರೇ.

ಅತಂತ್ರ ಬದುಕು
ಬೆಲೆ ಏರಿಕೆ ದಿನಮಾನ
ನೆಲೆಗಾಗಿ ಹೋರಾಟ ಹಾರಾಟ
ದೊಂಬರಾಟದ ಕೂಟ.

ಪರಿಸರ ಮಾಲೀನತೆಯ ಕೊಡುಗೆ
ಅಹಂನ ಪರಾಕಾಷ್ಟೆಯ ಉಡುಗೆ



ವರುಣನ ಕಣ್ಣಾಮುಚ್ಚಾಲೆ ಆಟಕೆ
ಧರಣಿಯ ಸೈರಣೆ ಕಟ್ಟೆ ಒಡೆದಿದೆ

ಬಣ ಬಣ ಬಣ
ಇಳೆಯ ಕಣ ಕಣ

ಮಳೆಯ ಚರಣ
ಕುಗ್ಗಿದ ಕಾರಣ.



ರೇಷ್ಮಾ ಕಂದಕೂರ

## ಆಡುವ ಮಾತಲಿ ಲಗಾಮು ಇರಲಿ

**ಬಾಲ್ಯ ಎನ್ನುವುದು ಅದೆಷ್ಟು ಸುಂದರ ಅಲ್ವಾ. ನಮ್ಮಿಷ್ಟದಂತೆ ಇರಬಹುದು. ನಮಗನ್ನಿಸಿದ್ದನ್ನು ಹೇಳಬಹುದು. ಯಾವುದೇ ಬಂಧನಕ್ಕೆ ಒಳಗಾಗದ ಸ್ವತಂತ್ರ ಪಕ್ಷಿಗಳಂತೆ ಇರುತ್ತೇವೆ. ಆ ಸಮಯದಲ್ಲಿ ಹಿರಿಯರಿಗೂ ನಾವಾಡುವ ಮಾತು ಅಷ್ಟೊಂದು ಕಹಿ ಅಥವಾ ತಪ್ಪು ಎಂದು ಅನ್ನಿಸುವುದಿಲ್ಲ. ಅದೇ ಸ್ವಲ್ಪ ಜ್ಞಾನ ಬೆಳೆಯಿತು ಎಂದರೆ ಸಾಕು, ಯಾರೊಂದಿಗೆ ಹೇಗೆ ಮಾತನಾಡಬೇಕು.**

ಹಾಗೆಯೇ ಯಾವ ರೀತಿ ನಮ್ಮ ನಡವಳಿಕೆ ಇರಬೇಕು ಎನ್ನುವುದನ್ನು ಯೋಚಿಸಿ ನಂತರ ಮಾತನಾಡಿ ಎಂದು ಬುದ್ದಿ ಮಾತು ಹೇಳಲು ಪ್ರಾರಂಭಿಸುತ್ತಾರೆ. ಅದಲ್ಲದೇ ನಾವಾಡುವ ಮಾತು ಯಾವತ್ತೂ ಯಾರ ಮನಸ್ಸನ್ನು ಚುಚ್ಚುವಂತಿರಬಾರದು ಎನ್ನುವ ವಿಚಾರವನ್ನು ಯಾವಾಗಲೂ ದೊಡ್ಡವರು ಹೇಳುವುದುಂಟು. ಒಂದು ಕ್ಷಣದಲ್ಲಿ ಇದರ ಕುರಿತು ಏನೂ ಅನ್ನಿಸದಿದ್ದರೂ ಸರಿಯಾಗಿ ಯೋಚಿಸಿದಾಗ ತಿಳಿಯುವುದು ಅವರು ಯಾವ ಕಾರಣಕ್ಕಾಗಿ ಹೇಳಿದರು ಎಂದು. ಒಂದು ಮಾತಿದೆ, ಮಾತು ಆಡಿದರೆ ಆಯಿತು, ಮುತ್ತು ಹೊಡೆದರೆ ಹೋಯಿತು ಎಂದು. ಅದರಂತೆ ನಾವಾಡುವ ಮಾತಿನ ಮೇಲೆ ನಿಗಾ ಇಡುವುದು ಮುಖ್ಯ.

ಒಮ್ಮೆ ಆಡಿ ಹೋದ ಮಾತನ್ನು ಪುನಃ ತೆಗೆದುಕೊಳ್ಳಲಾಗುವುದಿಲ್ಲ. ಅದೇ ಕಾರಣಕ್ಕೆ ನಾವಾಡುವ ಮಾತನ್ನು ಸರಿಯಾಗಿ ಆಲೋಚಿಸಿ ಮಾತನಾಡುವುದು ಒಳ್ಳೆಯದು ಎಂದು ಹೇಳುವುದು. ಆದರೆ ಇತ್ತೀಚಿನ ದಿನಗಳಲ್ಲಿ ಜನರು ಯಾವ ರೀತಿ ಬದಲಾಗಿದ್ದಾರೆ ಎಂದರೆ, ಏನೇ ಅನ್ನಿಸಿದರೂ ಅದನ್ನು ನೇರವಾಗಿ ಹೇಳಿ ಬಿಡುತ್ತಾರೆ. ಅದು ಸರಿಯಾ ಅಥವಾ ತಪ್ಪಾ ಎಂದು ಆಲೋಚಿಸುವುದೂ ಇಲ್ಲ. ಅದರಿಂದ ನಮ್ಮ ಮುಂದಿರುವ ವ್ಯಕ್ತಿಗೆ ಯಾವ



ರೀತಿ ಅನ್ನಿಸಬಹುದು ಎನ್ನುವುದನ್ನು ಅರ್ಥ ಮಾಡಿಕೊಳ್ಳುವ ಮನಸ್ಥಿತಿಗಳಂತೂ ಯಾರಲ್ಲೂ ಕಾಣದು. ಯಾವಾಗ ಒಬ್ಬ ವ್ಯಕ್ತಿಯ ಮನಸ್ಸಿಗೆ ನೋವುಂಟು ಮಾಡುವ ರೀತಿ ಮಾತನಾಡುತ್ತೇವೋ ಆ ಒಂದು ಮಾತಿನಿಂದ ಯಾವುದೇ ಸಂಬಂಧವನ್ನಾದರೂ ಸಹ ಹಾಳು ಮಾಡಿಕೊಳ್ಳುತ್ತೇವೆ. ಇತ್ತೀಚೆಗಂತೂ ಈ ರೀತಿಯ ವಿಚಾರವನ್ನು ಹೆಚ್ಚಾಗಿ ನೋಡುತ್ತಿದ್ದೇವೆ.

ಯಾರೋ ಏನಾದ್ರೂ ಹೇಳಿದ್ರೆ ಅದನ್ನು ಅಲ್ಲೇ ಕೂತು ಬಗೆಹರಿಸುವುದರ ಬದಲು ಇನ್ಸ್ಟಾ, ವಾಟ್ಸಾಪ್ ಗಳಲ್ಲಿ ಸ್ಟೋರಿ, ಸ್ಟೇಟಸ್ ಹಾಕಿಕೊಂಡು ಪ್ರತಿಕ್ರಿಯಿಸುವುದು ಅಥವಾ ಬೇಜಾರ್ ಮಾಡಿಕೊಂಡು ಇರುವುದು. ಈ ರೀತಿ ಮಾಡುವುದರಿಂದ ಯಾವುದೇ ಸಮಸ್ಯೆಯಾದರು ಬಗೆಹರಿಯಲು ಸಾಧ್ಯವಿಲ್ಲ. ಇನ್ನು ಜನರ ಮನಸ್ಥಿತಿಗಳು ಬದಲಾಗಲು, ಇನ್ನೊಬ್ಬರ ಭಾವನೆಗಳಿಗೆ ಬೆಲೆ ಕೊಡದೇ ಮಾತನಾಡಲು ಮೂಲ ಕಾರಣ ಸಾಮಾಜಿಕ ಮಾಧ್ಯಮಗಳೇ. ಏಕೆಂದರೆ ಯಾವಾಗ ಆಧುನೀಕರಣ ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಯಿತೋ, ಜನರ ಮನಸ್ಥಿತಿಗಳು ಸೋಷಿಯಲ್ ಮೀಡಿಯಾಗಳಿಗೆ ಸೀಮಿತವಾಯಿತು.

ಏನೇ ಬೇಜಾರ್ ಆಗಲಿ, ಖುಷಿ ಆಗಲಿ ಅದೆಲ್ಲವನ್ನು ತೋರ್ಪಡಿಸುವ ರೀತಿ ಬದಲಾಗಿದ್ದು, ವ್ಯಕ್ತಿಗಳ ನಡುವಿನ ಬಾಂಧವ್ಯಗಳು ಕಳೆದು ಹೋಗುವುದನ್ನು ನಾವಿಂದು ಕಾಣಬಹುದು. ಇಂದು ನಮಗೇನೇ ಅನ್ನಿಸಿದರೂ ಅದನ್ನು ವ್ಯಕ್ತ ಪಡಿಸುವ ರೀತಿ ಸೋಷಿಯಲ್ ಮೀಡಿಯಾ. ಯಾರಿಂದಲೋ ಬೇಜಾರ್ ಆಯ್ತು ಇನ್ಸ್ಟಾದಲ್ಲಿ ಸ್ಯಾಡ್ ರಿಲ್ಸ್ ಗಳನ್ನು ಸ್ಟೋರಿ ಹಾಕುವುದು. ಇದರಿಂದ ಯಾವುದೇ ಸಮಸ್ಯೆ ಬಗೆಹರಿಯಲು ಸಾಧ್ಯವಿಲ್ಲ. ಭಾವನೆಗಳನ್ನು ಒಬ್ಬರೊಂದಿಗೆ ಹಂಚಿಕೊಂಡಾಗ ಮಾತ್ರ ಯಾವುದೇ ಸಮಸ್ಯೆಯಾದರು ಬಗೆಹರಿಯಲು ಸಾಧ್ಯ.

ಯಾಕೆ ಈ ಬದಲಾವಣೆ ಎಂದು ನೋಡಿದರೆ ಮೊದಲಿಗೆ ತಿಳಿಯುವುದು ನಾವು ಡಿಜಿಟಲೀಕರಣಕ್ಕೆ ಒಗ್ಗಿಕೊಂಡಿರುವುದು. ತಂತ್ರಜ್ಞಾನ ಹೆಚ್ಚಾದಂತೆ ನಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುತ್ತಿದ್ದೇವೆ. ಹಿಂದೆಲ್ಲಾ ಈ ತರಹದ ಮಾಧ್ಯಮಗಳಿಲ್ಲದ ಕಾರಣ ಯಾವುದೇ ಸಮಸ್ಯೆಗಳಿದ್ದರು ಅದನ್ನು ಅಲ್ಲೇ ಮಾತನಾಡಿ ಬಗೆಹರಿಸುತ್ತಿದ್ದರು. ಇಂದು ಸ್ವಲ್ಪ ಗಲಾಟೆ ಅಥವಾ ಮಿಸ್ ಅಂಡರ್ ಸ್ಟ್ಯಾಂಡಿಂಗ್ ಆದ್ರು ಅದನ್ನು ಯಾವತ್ತೂ ಎದುರು ಬದುರು ಕೂತು ಮಾತನಾಡುವ ಪರಿಯೇ ಇಲ್ಲ. ಎಲ್ಲೋ ಒಂದು ಕಡೆ ತಪ್ಪಾಗಿದೆ ಎಂದಾದರೆ ಅದುವೇ ದೊಡ್ಡದು ಎನ್ನುವಂತೆ ಇದ್ದು ಬಿಡುತ್ತಾರೆ. ಅದನ್ನು ಸರಿ ಪಡಿಸುವುದನ್ನು ಮೊದಲು ತಿಳಿಯಬೇಕೇ ಹೊರತು ಇನ್ನಷ್ಟು ದೂರ ಸರಿಸಲು ಅಲ್ಲ.

ಎಲ್ಲರ ಬಳಿಯೂ ಮೊಬೈಲ್ ಗಳಿರುವ ಕಾರಣದಿಂದಲೇ ನಮ್ಮ ಬಳಿ ಯಾರಿದ್ದಾರೆ, ಯಾರೊಂದಿಗೆ ಹೇಗೆ ಮಾತನಾಡಬೇಕು ಯಾವುದನ್ನೂ ತಿಳಿದುಕೊಂಡಿಲ್ಲ. ಮೊಬೈಲ್ ಒಂದು ಇದ್ದರೆ ಬೇರೆ ಯಾವ ವಿಷಯವೂ ತಿಳಿಯದು. ನಮ್ಮ ಸುತ್ತ ಮುತ್ತ ಏನಾಗುತ್ತಿದೆ ಎಂದೂ ಸಹ ತಿಳಿಯದವರಂತೆ ಇದ್ದು ಬಿಡುತ್ತಾರೆ. ಅದರ ಬದಲು ಒಮ್ಮೆ ಸುತ್ತ ಮುತ್ತ ನಡೆಯುತ್ತಿರುವ ವಿಚಾರಗಳನ್ನು, ಪ್ರಕೃತಿ ಸೌಂದರ್ಯವನ್ನು ಹಾಗೂ ಮನೆಯವರೊಂದಿಗೆ ಸ್ವಲ್ಪ ಸಮಯವನ್ನು ಕಳೆಯಿರಿ ಜೀವನ ಎಷ್ಟೊಂದು ಸುಂದರ ಎಂದನ್ನಿಸುವುದಂತೂ ಸತ್ಯ.



ಧನ್ಯಶ್ರೀ ಆಚಾರ್ಯ.

# ಜುಲೈ 21, ನರಗುಂದ ಬಂಡಾಯ ದಿನ, ಬಸಾಪುರ ಕೆರೆ ವಿಮುಕ್ತಿ ದಿನವಾಗಿಸೋಣ: ಚಾಮರಸ

## ಬಲ್ಡೋಟ ವಿರೋಧಿ 50ನೇ ದಿನದ ಬಸಾಪುರ ಕೆರೆ ಹೋರಾಟ ವೇದಿಕೆಯಲ್ಲಿ ಸಮಾವೇಶ;

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ತಾಲ್ಲೂಕಿನ ಬಸಾಪುರ, ಕಿಡದಾಳ, ಹಲವರ್ತಿ ಗ್ರಾಮಗಳ ಸರ್ಕಾರಿ ಬಂಡಿ ರಸ್ತೆ, ಕಾಲುದಾರಿಗೆ ಬಲ್ಡೋಟ ಕಂಪನಿ ಕಾಂಪೌಂಡ್ ಕಟ್ಟಿ ಸಾರ್ವಜನಿಕ ಸಂಚಾರ ನರ್ಬಂಧಿಸಲಾಗಿದೆ. ಮುಂದಿನ ಹೊಲಗಳಿಗೆ ರೈತರು ಹೋಗಿ ಕೃಷಿ ಚಟುವಟಿಕೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಈಚಘಟ್ಟ ಸಿದ್ದವೀರಪ್ಪ ಸಮಾವೇಶದಲ್ಲಿ ನೆರೆದ ರೈತರನ್ನು ಉದ್ದೇಶಿಸಿ ಮಾತನಾಡಿದರು.**

ಬಲ್ಡೋಟ ಕಂಪನಿ 2007ರಲ್ಲಿ ತನ್ನ ಭೂದಾಹ ತೀರಿಸಿಕೊಳ್ಳಲು ಪಾರಂಪರಿಕ ಸಮುದಾಯದ ಸ್ವತ್ತೂ ಬಿಡದೆ 33 ಲಕ್ಷ ನೀಡಿ ಜಿಲ್ಲಾಧಿಕಾರಿಯಿಂದ ಬಸಾಪುರ ಸ.ನಂ.143ರ 44.35 ಎಕರೆ ಭೂ–ಮಂಜೂರಿ ಹೆಸರಿನಲ್ಲಿ ವಶಪಡಿಸಿಕೊಂಡಿದೆ. ಈ ಕೆರೆಯನ್ನು ಸರ್ಕಾರ ಮಾಡಿಕೊಟ್ಟಿಲ್ಲ. ಕೆರೆಗಳನ್ನು ನಮ್ಮ ಪೂರ್ವಿಕರು ಮುಂದಿನ ಪೀಳಿಗೆಯ ಭವಿಷ್ಯ ಕಾಪಾಡಲು ಈ ಸ್ವತ್ತು ಕೊಟ್ಟಿದ್ದಾರೆ. ಇದನ್ನು ಮಾರಾಟ ಮಾಡುವ ಹಕ್ಕು ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಇಲ್ಲ. ಇಂಥ ನೈಸರ್ಗಿಕ ಜಲಮೂಲದ ಪಥ ಬದಲಾವಣೆ ಮಾಡುವುದು ಘೋರ ಅಪರಾಧವಾಗುತ್ತದೆ. ಬಲ್ಡೋಟ ಈ ಕೆರೆಯ ಹಳ್ಳದ ದಿಕ್ಕುಗಳನ್ನು ಬದಲಾಯಿಸಿ ಕೆರೆಗೆ ನೀರು ಬಂದು ಸೇರದಂತೆ ಮಾಡಿದಾಗಲೂ ಜಿಲ್ಲಾಧಿಕಾರಿ ಮೌನ ವಹಿಸಿದ್ದಾರೆ ಎಂದಾದರೆ ಅವರು ರೈತರು ಕಾನೂನು ಮುರಿಯಲು ಪ್ರೇರೇಪಿಸುತ್ತಿದ್ದಾರೆ ಎಂದು ತೋಚುತ್ತಿದೆ ಎಂದು ಅಸಮಾಧಾನ ಹೊರ ಹಾಕಿದರು.



50ನೇ ದಿನದ ಬಸಾಪುರ ಕೆರೆ ಹೋರಾಟದ ಸಮಾವೇಶದಲ್ಲಿ ಖ್ಯಾತ ಪತ್ರಕರ್ತ, ಪ್ರಗತಿಪರ ರೈತ ಲಕ್ಷ್ಮಣ ಹೂಗಾರ ಮಾತನಾಡಿ ಇಂಥ ಜೀವಸೂಕ್ಷ್ಮ ಗ್ರಾಮಸ್ಥರ ಸಂಪತ್ತನ್ನು ಕೊಪ್ಪಳದಲ್ಲಿ ಹೇಗೆ ಮಾರಾಟ ಮಾಡಿದರು ಎನ್ನುವುದೇ ಸೂಜಿಗವಾಗಿದೆ.

ನಾನು ಎಲ್ಲಾ ಸ್ಥಾನಮಾನದ ರಾಜಕೀಯ ಪಕ್ಷದವರನ್ನು, ಧುರೀಣರನ್ನು ಸಂದರ್ಶನ ಮಾಡಿದ್ದೇನೆ. ಆದರೆ 44 ಎಕರೆ ಕೆರೆ ಮಾರಾಟ ಮಾಡಿ ಏನೂ ಗೊತ್ತಿಲ್ಲ ಎನ್ನುವಂತೆ ನಡೆದುಕೊಳ್ಳುವ ಅಧಿಕಾರಸ್ಥರ ಮೇಲೆ ಉನ್ನತ ಮಟ್ಟದ ಸ್ವಾಯತ್ತ ಸಂಸ್ಥೆಗಳಿಂದ ತನಿಖೆ ನಡೆಸಬೇಕು. ಅವರು ಎಷ್ಟೇ ದೊಡ್ಡವರಾದರೂ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇಲ್ಲಿನ ರಾಜಕಾರಣಿಗಳು ಕೊಪ್ಪಳ ಜನ ನಡೆಸುತ್ತಿರುವ ಮಾಲಿನ್ಯ ವಿರೋಧಿ ಹೋರಾಟಕ್ಕೆ ಪ್ರಾಮಾಣಿಕವಾಗಿ ಸ್ಪಂದಿಸಿ ಆರೋಗ್ಯದ ದುಷ್ಪರಿಣಾಮ ಮಾಡುವ ಕಾರ್ಖಾನೆಗಳನ್ನು ಮುಚ್ಚಲಿ. ನಾನೂ ಈಗ ಪತ್ರಕರ್ತ ಅಲ್ಲ. ಇದು ನನ್ನ ಕುಟುಂಬದ ತವರು ಭೂಮಿ. ಈ ಜನ ನೋವು ಅನುಭವಿಸಿದರೆ ನನಗೂ ಅಷ್ಟೇ ನೋವಾಗುತ್ತದೆ. ನಾನು ಯಾವಾಗ ಕರೆದರೂ ಬಂದು ಬಂಬಲಿಸುತ್ತೇನೆ ಎಂದರು.

ಇನ್ನೊಬ್ಬ ರೈತ ಮುಖಂಡ, ಗೌರವಾಧ್ಯಕ್ಷ ಚಾಮರಸ ಮಾಲಿಪಾಟೀಲ ಅವರು ಜುಲೈ 21 ನರಗುಂದ ಬಂಡಾಯದ ದಿನ. ಅಷ್ಟರೊಳಗಾಗಿ ಕೆರೆಯನ್ನು ರೈತರ ಬಳಕೆಗೆ ಸರಕಾರ ಬಲ್ಡೋಟ ಕಂಪನಿಯ ಕಾಂಪೌಂಡ್ ತೆರವು ಮಾಡಿ ಕೆರೆ ಕೊಡದಿದ್ದರೆ ಅಂ–ದು ರಾಜ್ಯ ಮಟ್ಟದ 'ಬಸಾಪುರ ಕೆರೆ ಅತಿಕ್ರಮಣ ತೆರವು' ಚಳವಳಿಗೆ ಕರೆ ನೀಡಿ 28 ಜಿಲ್ಲೆಗಳಿಂದ ರೈತರನ್ನು ಸೇರಿಸಿ ಕಾಂಪೌಂಡ್ ತೆರವು ಮಾಡುತ್ತೇವೆ. ಆಗ ಸರಕಾರ ತಡೆಯಲಿ ನೋಡೋಣ ಎಂದರು. ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಜಂಟಿ ಕ್ರಿಯಾ ವೇದಿಕೆ ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ ಅತಿಥಿ–ಯಾಗಿ ಮಾತನಾಡಿ ಕೆರೆ ಸಂರಕ್ಷಣೆ ಮಾಡಿಕೊಳ್ಳಲು 2007ರಿಂದಲೇ ಕಾನೂನಾತ್ಮಕ ಹಾಗೂ ಬೀದಿ ಹೋರಾಟ ಮಾಡುತ್ತಾ ಬಂದ ವಿಷಯ ಪ್ರಸ್ತಾಪಿಸಿದರು. ಕೆರೆ ಯಾವುದೇ ಕಾರಣದಿಂದಲೂ ಬಲ್ಡೋಟ ಕಂಪನಿ ದಕ್ಕಿಸಿಕೊಳ್ಳಲು ಸಾಧ್ಯವಿಲ್ಲ. ಸುತ್ತಲ ಗ್ರಾಮಗಳಲ್ಲಿ ಕೆಲವ–ರಿಗೆ ಆಶೆ ಹುಟ್ಟಿಸಿ ಕೆರೆ ತನ್ನದಾಗಿಸಿಕೊಳ್ಳುತ್ತೇನೆ ಎನ್ನುವ ಭ್ರಮೆಯಲ್ಲಿ ಕಂಪನಿ ಇದ್ದರೆ ಇಷ್ಟರಲ್ಲೇ ಈ ಕೆರೆ ಮಂಜೂರಿ ಮಾಡಿದ, ಕಾಂಪೌಂಡ್ ಕಟ್ಟಲು ಅನುಮತಿ ಕೊಟ್ಟ ಅಧಿಕಾರಿಗಳನ್ನು ತನಿಖೆಗೊಳಪಡಿಸುತ್ತೇವೆ ಎಂದರು.

ಜಿಲ್ಲಾಧ್ಯಕ್ಷ ಭೀಮಸೇನ ಕಲಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದಕ್ಕೂ ಮೊದಲು ವಿದ್ಯುತ್ ವಿತರಣೆಯ ಪರವಾನಿಗೆಯನ್ನು ಟಾಟಾ ಪವರ್ ಕಂಪನಿಗೆ ಕೊಡುವ ಖಾಸಗೀಕರಣವನ್ನು ವಿರೋಧಿಸಿ, ಮುಂಗಾರು ವೈಫಲ್ಯವಾದ ಹಿನ್ನೆಲೆಯಲ್ಲಿ ಜಿಲ್ಲೆಯನ್ನು ಬರಗಾಲ ಬಾಧಿತ ಜಿಲ್ಲೆಯೆಂದು ಘೋಷಿಸಬೇಕು, ಪಂಪ್ಸೆಟ್ ರೈತ–ರಿಗೆ ಸಮರ್ಪಕವಾಗಿ ರಸಗೊಬ್ಬರ ಪೂರೈಸಬೇಕು ಎಂದು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಯಿತು. ಪ್ರತಿಭಟನಾ ಸಮಾವೇಶದಲ್ಲಿ ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಎಲ್.ಕೆ ನಾಯ್ಡು, (ಎಚ್.ಆರ್. ಬಸವರಾಜಪ್ಪ ಬಣದ ) ಜಿಲ್ಲಾಧ್ಯಕ್ಷ ಗಣೇಶರೆಡ್ಡಿ ಕನಕಗಿರಿ, ಮರಿಯಪ್ಪ ಸಾಲೋಣಿ, ಮೂಕಪ್ಪ ಮೇಸ್ತ್ರಿ ಬಸಾಪುರ, ನೂರಂದಪ್ಪ ಉಪ್ಪಿನ್, ಬಸವರಾಜ ಶೀಲವಂತರ, ಎಸ್.ಎ. ಗಫಾರ್, ಶರಣು ಗಡ್ಡಿ, ಯಮನೂರಪ್ಪ ಹಾಲಳ್ಳಿ ಬಸಾಪುರ, ಜಿಲ್ಲಾ ಕಾರ್ಯಾಧ್ಯಕ್ಷ ಕನಕಪ್ಪ ಪೂಜಾರ, ಜಿಲ್ಲಾ ಉಪಾಧ್ಯಕ್ಷರಾದ ಹನುಮಂತಪ್ಪ ಇರಕಲ್ಲಗಡಾ, ನಾಗಪ್ಪ ಕಿನ್ನಾಳ, ಜಿಲ್ಲಾ ಪ್ರ.ಕಾರ್ಯದರ್ಶಿ ವೆಂಕಟೇಶ ಗುನ್ನಾಳ, ಜಿಲ್ಲಾ ಖಜಾಂಚಿ ಬಸವರಾಜ ಹೂಗಾರ, ಶೇಖಪ್ಪ ಹಟ್ಟಿ, ದೇವಪ್ಪ ಮುದ್ಲಾಪೂರ, ಮಂಗಳೇಶ ರಾಠೋಡ್, ಯಂಕಪ್ಪ ಬಿಸನಹಳ್ಳಿ ಕಾಸನಕಂಡಿ, ನಾಗರಾಜ ಎಲಿಗಾರ, ಹನುಮಂತ ತಳವಾರ ಬಸಾಪುರ, ಹನುಮಂತಪ್ಪ ಜಂತ್ಲಿ ಇನ್ನೂ ಅನೇಕ ರೈತ ಸಂಘದ ಕಾರ್ಯಕರ್ತರು ಪಾಲ್ಗೊಂಡಿದ್ದರು.

## ಓಸಿ ಇಲ್ಲದಿದ್ದರೂ ವಿದ್ಯುತ್ ಸಂಪರ್ಕ : ರಾಜ್ಯ ಸರ್ಕಾರ ಮಹತ್ವದ ನಿರ್ಧಾರ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಹೊಸದಾಗಿ ನಿರ್ಮಿಸಿರುವ ಮನೆಗಳಿಗೆ ಸ್ವಾಧೀನ ಪ್ರಮಾಣಪತ್ರ (ಓಸಿ) ಇಲ್ಲದೆ ಶಾಶ್ವತ ವಿದ್ಯುತ್ ಸಂಪರ್ಕ ಪಡೆಯಲು ಕಾಯುತ್ತಿದ್ದ ಸಾರ್ವಜನಿಕ–ರಿಗೆ ರಾಜ್ಯ ಸರ್ಕಾರ ಮಹತ್ವದ ಸಡಿಲಿಕೆ ನೀಡಿದೆ. ಮೇ 31, 2026ರೊಳಗೆ ಪೂರ್ಣಗೊಂಡ ವಸತಿ ಕಟ್ಟಡಗಳಿಗೆ ಒಂದು ಬಾರಿಯ ವಿಶೇಷ ವಿನಾಯಿತಿ ನೀಡಿ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಆದೇಶ ಹೊರಡಿಸಿದೆ.**



ಯೋಜನೆಯ ಅನುಷ್ಠಾನಕ್ಕಾಗಿ ಇಂಧನ ಇಲಾಖೆ ರಾಜ್ಯದ ಎಲ್ಲಾ ಎಸ್ಕಾಂಗಳಿಗೆ ವಿವರವಾದ ಮಾರ್ಗಸೂಚಿಗಳನ್ನು ಜಾರಿ ಮಾಡಿದೆ.ಸರ್ಕಾರದ ಆದೇಶದಂತೆ, ಓಸಿ ಇಲ್ಲದಿದ್ದರೂ ಅರ್ಹ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ನೀಡಬಹುದಾಗಿದೆ. ಆದರೆ ಈ ಸೌಲಭ್ಯವು 2026ರ ಮೇ 31ರೊಳಗೆ ಪೂರ್ಣಗೊಂಡಿರುವ ಕಟ್ಟಡಗಳಿಗೆ ಮಾತ್ರ ಅನ್ವಯವಾಗುತ್ತದೆ. ಆದೇಶ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗೆ ಅರ್ಜಿಗಳನ್ನು ಸ್ವೀಕರಿಸಿ ವಿಲೇವಾರಿ ಮಾಡಬೇಕು ಎಂದು ಎಸ್ಕಾಂಗಳಿಗೆ ಸೂಚಿಸಲಾಗಿದೆ. ಈಗಾಗಲೇ ಶಾಶ್ವತ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿರುವವರಿಗೆಮೇ 31ರೊಳಗೆ ಕಟ್ಟಡ ಪೂರ್ಣಗೊಳಿಸಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ ಪ್ರಕರಣಗಳಲ್ಲಿ ಅರ್ಜಿ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಕಟ್ಟಡದ ಜಿಯೋ–ಟ್ಯಾಗ್ ಫೋಟೋ, ದಿನಾಂಕ ಮತ್ತು ಸಮಯದ ಮಾಹಿತಿಯನ್ನು ಅಧಿಕಾರಿಗಳ ಸಮ್ಮುಖದಲ್ಲಿ ದಾಖಲಿಸಿ ಅಪ್ಲೋಡ್ ಮಾಡಬೇಕು. ತಾತ್ಕಾಲಿಕ ಸಂಪರ್ಕ ಪಡೆದವರಿಗೆತಾತ್ಕಾಲಿಕ ವಿದ್ಯುತ್ ಸಂಪರ್ಕದ ಆಧಾರದಲ್ಲಿ ಕಟ್ಟಡ ನಿರ್ಮಿಸಿ ಇನ್ನೂ ಶಾಶ್ವತ ಸಂಪರ್ಕಕ್ಕೆ ಅರ್ಜಿ ಸಲ್ಲಿಸದವರು ಸರ್ಕಾರದ ಆದೇಶ ಹೊರಬಿದ್ದ 15 ದಿನಗಳೊಳಗೆ ಅರ್ಜಿ ಸಲ್ಲಿಸಬೇಕು. ತಾತ್ಕಾಲಿಕ ಸಂಪರ್ಕ ಮತ್ತು ಹೊಸ ಅರ್ಜಿಯಲ್ಲಿರುವ ಮಾಲೀಕರ ಹೆಸರು ಒಂದೇ ಆಗಿರುವುದನ್ನು ಖಚಿತ ಪಡಿಸಿಕೊಳ್ಳಲಾಗುತ್ತದೆ. ಜಿಯೋ–ಟ್ಯಾಗ್ ಫೋಟೋ ಅಪ್ಲೋಡ್ ಕಡ್ಡಾಯ ವಾಗಿದೆ. ಯಾವುದೇ ಸಂಪರ್ಕ ಪಡೆಯದ ಕಟ್ಟಡಗಳಿಗೂ ಅವಕಾಶ ನೀಡಲಾಗಿದೆ. ಮೇ 31ರೊಳಗೆ ಕಟ್ಟಡ ಪೂರ್ಣಗೊಂಡಿದ್ದರೂ ತಾತ್ಕಾಲಿಕ ಅಥ–ವಾ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸದವರು ಉಪ ವಿಭಾಗ ಕಚೇ–ರಿಗಳಲ್ಲಿ ಭೌತಿಕವಾಗಿ ಅರ್ಜಿ ನೋಂದಾಯಿಸಬಹುದು. ಇಂತಹ ಅರ್ಜಿದಾರರು 15 ದಿನಗಳೊಳಗೆ ಹೊಸ ಅರ್ಜಿ ಸಲ್ಲಿಸಿ ಜಿಯೋ–ಟ್ಯಾಗ್ ಫೋಟೋಗಳನ್ನು ಹಾಜರುಪಡಿಸಬೇಕು. ಕ್ಷೇತ್ರಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಕಟ್ಟಡ ಪೂರ್ಣ ಗೊಂಡಿರುವುದನ್ನು ಖಚಿತಪಡಿಸಿಕೊಂಡ ನಂತರ ವರದಿಯನ್ನು ಸಹಾಯಕ ಅಭಿಯಂತರರಿಗೆ ಸಲ್ಲಿಸಬೇಕು. ಅರ್ಜಿ ಪರಿಶೀಲನೆ ಪೂರ್ಣಗೊಂಡ ಬಳಿಕ ಸಿಸಿಬಿ ತಂತ್ರಾಂಶದಲ್ಲಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅಪ್ಲೋಡ್ ಮಾಡಲಾಗುತ್ತದೆ ಎಂದು ತಿಳಿಸಿದರು. ಯಾರಿಗೆ ಅನ್ವಯ–ವಸತಿ ಕಟ್ಟಡಗಳು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ), ಮಹಾನಗರ ಪಾಲಿಕೆ, ನಗರ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟಡಗಳು.2,400 ಚದರ ಅಡಿವರೆಗಿನ ನಿವೇಶನಗಳಲ್ಲಿ (+20% ವಿನಾಯಿತಿಯೊಂದಿಗೆ ಗ–ರಿಷ್ಠ 2,800 ಚದರ ಅಡಿ).ಜಿ+3 ಅಥವಾ ಪಾರ್ಕಿಂಗ್ + 4 (+4) ಮಹಡಿಗಳವರೆಗಿನ ವಸತಿ ಕಟ್ಟಡಗಳು. ಕೃಷಿ ಸಂಬಂಧಿತ ಕಟ್ಟಡಗಳು: ಗ್ರಾಮೀಣ ಪ್ರದೇಶಗಳ ರೈತರ ಮನೆ, ತೋಟದ ಮನೆ, ಕೃಷಿ ಉಪಕರಣಗಳ ಶೆಡ್, ದನದ ಕೊಟ್ಟಿಗೆ ಹಾಗೂ ರೇಷ್ಮೆ ಗೂಡಿನ ಮನೆಗಳಿಗೆ ನಿವೇಶನ ಅಥವಾ ಕಟ್ಟಡದ ವಿಸ್ತೀರ್ಣದ ಮಿತಿ ಇಲ್ಲದೆ ಓಸಿಯಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

# ಗಾಣದಾಳ :5ನೇ ಅಂಗನವಾಡಿ ಕೇಂದ್ರ ಉಧ್ಘಾಟನೆ

## ಅಂಗನವಾಡಿ ಕೇಂದ್ರಗಳ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಿ : ಸಿಡಿಪಿಓ ಬೇಟದೇಶ್

ಅ.ಶ. ಸುದ್ದಿ ಮುನಿರಬಾದ

**ಯಲಬುರ್ಗಾ: ಅಂಗನವಾಡಿ ಕೇಂದ್ರಗಳಿಗೆ ಬರುವ ಪ್ರತಿಯೊಂದು ಸೌಲಭ್ಯಗಳನ್ನು ಮಕ್ಕಳು ಹಾಗೂ ಗರ್ಭಿಣಿ ಮಹಿಳೆಯರ ಸದುಪಯೋಗ ಪಡಿಸಿಕೊಳ್ಳಲು ಮುಂದಾಗಬೇಕು ಎಂದು ಯಲಬುರ್ಗಾ ತಾಲೂಕ ಶಿಶು ಯೋಜನಾಭಿವೃದ್ಧಿ ಅಧಿಕಾರಿ ಬೆಟದೇಶ್ ಮಾಳೆಕೊಪ್ಪ ಹೇಳಿದರು.**

ಅವರು ಮಂಗಳವಾರದಂದು ತಾಲ್ಲೂಕಿನ ಗಾಣದಾಳ ಗ್ರಾಮದ 5ನೇ ಅಂಗನವಾಡಿ ಕೇಂದ್ರದ ನೂತನ ಕೊಠಡಿ ಉಧ್ಘಾಟನೆ ನೆರವೇರಿಸಿ ಮಾತನಾಡಿ ಸರಕಾರ ಅಂಗನವಾಡಿ ಕೇಂದ್ರಗಳ ಮೂಲಕ ಅಪೌಷ್ಠಿಕ ಮಕ್ಕಳನ್ನು ಪೌಷ್ಠಿಕತೆಗೆ ಕರೆ ತರಲು ಹಾಗೂ ಕಲಿಕೆಗೆ ಪೂರಕ ವಾತಾವರಣ ಕಲ್ಪಿಸುವ ಜೊತೆಗೆ ಪೌಷ್ಠಿಕ ಆಹಾರವನ್ನು ಪೂರೈಕೆ ಮಾಡುತ್ತಿದ್ದು, ಇದರ ಪ್ರಯೋಜನ ಪಡೆದುಕೊಳ್ಳುವ ಮೂಲಕ ಆರೋಗ್ಯಯುತ ಸಮಾಜ ನಿರ್ಮಾಣ ಮಾಡಲು ಪಾಲಕರು ಮುಂದಾಗಬೇಕು ಎಂದು ಕರೆ ನೀಡಿದರು.



ಅಂಗನವಾಡಿ ಕೇಂದ್ರದಲ್ಲಿ ಗರ್ಭಿಣಿ ಸ್ತ್ರೀಯ–ರಿಗೆ ವಿತರಿಸುವ ಮೊಟ್ಟೆ, ಆಹಾರ ಪದಾರ್ಥ–ಗಳ ಗುಣ ಮಟ್ಟವನ್ನು ಪರಿಶೀಲಿಸಿ, ಸಮಕ್ಕೆ ಸರಿಯಾಗಿ ಉತ್ತಮ ಪೌಷ್ಠಿಕ ಆಹಾರ ಪಡೆದುಕೊಳ್ಳುವ ಮೂಲಕ ಅವರ ಆರೋಗ್ಯದ ಕಡೆಗೆ ಗಮನ ಹರಿಸಬೇಕು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ನೀಡುವ ಸಲಹೆ ಸೂಚನೆಗಳ ಮೆರೆಗೆ ತಮ್ಮ ಆರೋಗ್ಯ ಪರಿಶೀಲನೆ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು.

ನಮ್ಮ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಬೇಕಿರುವ ಮೂಲಭೂತ ಸೌಕರ್ಯ ಹಾಗೂ ಸೌಲಭ್ಯಗಳಿಗೆ ಕೊರತೆ ಇಲ್ಲದಂತೆ ನಮ್ಮ ಶಾಸಕರು ನಮ್ಮ ಇಲಾಖೆಗೆ ಹೆಚ್ಚು ಒತ್ತು ನೀಡುತ್ತಿದ್ದು ತಾಲ್ಲೂಕಿನ ಪ್ರತಿಯೊಂದು ಹಳ್ಳಿಗಳ ಅಂಗವಾಡಿಗಳನ್ನು ಉತ್ತೇಜಿಸಲಾಗುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಗಾಣದಾಳ ಅಂಗನವಾಡಿ ಕೇಂದ್ರಗಳ ಶಿಕ್ಷಕಿಂ–ಯರು, ಸಹಾಯಕಿಯರು, ಸೇರಿದಂತೆ ಪಾಲಕರು, ಮಕ್ಕಳು, ಗ್ರಾಮದ ಹಿರಿಯರು, ಮಹಿಳೆಯರು, ಮುಖಂಡರು ಉಪಸ್ಥಿತರಿದ್ದರು.

# ಗರ್ಭಿಣಿ ಮಹಿಳೆ ಸಾವಿಗೆ ಕಾರಣರಾದ ಡಾ. ಪವನ್ ಕುಮಾರ್



ಅ.ಶ. ಸುದ್ದಿ ಲಿಂಗಸಗೂರು

**ಲಿಂಗಸಗೂರು: ಗರ್ಭಿಣಿ ಮಹಿಳೆ ಸಾವಿಗೆ ಕಾರಣರಾದ ಡಾ. ಪವನ್ ಕುಮಾರ್ ಹಾಗೂ ನರ್ಸ್ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಿ ಸೇವೆಯಿಂದ ಅಮಾನತ್ತು ಮಾಡಬೇಕೆಂದು ದಲಿತ ಸೇನೆ ಮಹಿಳಾ ಘಟಕ ಜಿಲ್ಲಾ ಅಧ್ಯಕ್ಷೆ ಜಯಶ್ರೀ ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಧಿಕಾರಿ ಡಾ ರುದ್ರಗೌಡ ಪಾಟೀಲ್ ಇವರಿಗೆ ಮನವಿಯನ್ನು ಸಲ್ಲಿಸಿ ಮಾತನಾಡಿದ ಅವರು**

ಹೆರಿಗೆ ನೋವು ಕಾಣಿಸಿ ಕೊಂಡಿರುವ ಕಾರಣ ಪಟ್ಟಣದ ಸರಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದು ತದನಂತರದಲ್ಲಿ ಡಾ: ಪವನಕುಮಾರ ರವರು ತಪಾಸಣೆ ಮಾಡಿ ಇದು ಸರಳ ಹೆರಿಗೆ ಆಗಲ್ಲಾ ಸಿಜರಿನ್ ಮಾಡಬೇಕೆಂದು ಹೇಳಿದ್ದು ಇದಕ್ಕೆ ವೃತ ಕಾವೇರಿ ಕುಟುಂಬಸ್ಥರು ಒಪ್ಪಿಕೊಂಡರು ನಂತರದಲ್ಲಿ ಸೀಜರಿನ್ ಆಪರೇಷನ್ ಮಾಡುವ ಸಂದರ್ಭದಲ್ಲಿ ಡಾ. ಪವನ್ ಕುಮಾರ್ ನಿರ್ಲಕ್ಷತದಿಂದ ಕಿಡ್ನಿಗೆ ಸಂಬಂದಿಸಿದ ನರಗಳನ್ನು ಕಟ್ ಮಾಡಿರುತ್ತಾರೆ.

ರಕ್ತಸ್ರಾವ ನಿಲ್ಲದ ಕಾರಣ ಎರಡು ಬಾಟಲಿಗಳು ರಕ್ತ ಬೇಕಾಗುತ್ತದೆ ಎಂದು ಹೇಳಿದ್ದು ಎರಡು ಬಾಟಲಿ ರಕ್ತ ಗರ್ಭಿಣಿ ಮಹಿಳೆಗೆ ಏರಿಸಿದರು. ಅದರೂ ಸಹ ರಕ್ತಸ್ರಾವ ನಿಲ್ಲದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ರಾಯಚೂರು ಜಿಲ್ಲಾ ರಿಮ್ಸ್ ಆಸ್ಪತ್ರೆಗೆ ಸಿಫಾರಸ್ಸು ಮಾಡಿರುತ್ತಾರೆ. ಅಲ್ಲಿ ಸಹ ನಾಲ್ಕು ಬಾಟಲಿಗಳು ರಕ್ತ ಬಾಣತಿಗೆ ಹಾಕಬೇಕೆಂದು ಹೇಳಿದ್ದು ನಾಲ್ಕು ಬಾಟಲಿ ರಕ್ತವನ್ನು ಬಾಣಂತಿಗೆ ಏರಿಸುತ್ತಾರೆ. ಆದ–ರೂ ಸಹ ರಕ್ತಸ್ರಾವ ನಿಲ್ಲದೇ ಗರ್ಭಿಣಿ ಮಹಿಳೆ ಶ್ರೀಮತಿ ಕಾವೇರಿ ಚಿಕಿತ್ಸೆ ಪಲಕಾರಿ ಯಾಗದೆ ಮೃತಪಟ್ಟಿರುತ್ತಾಳೆ. ಬಡವರ ಜೀವಗಳ ಜೊತೆ ಚೆಲ್ಲಾಟ ಹಾಡಿದ ಸರ್ಕಾರಿ ಆಸ್ಪತ್ರೆಯ ಡಾ. ಪವನ ಕುಮಾರ ಮತ್ತು ನರ್ಸ್ ಗಳ ನಿರ್ಲಕ್ಷ್ಯದಿಂದ ಗರ್ಭಿಣಿ ಮಹಿಳೆ ಮೃತಪಟ್ಟಿರುತ್ತಾಳೆ. ಕಾರಣ ಇವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಿ ಇವರಿಗೆ ನ್ಯಾಯ ಒದಗಿಸಿಕೊಡಬೇಕು.

ಇಂತಹ ಪ್ರಕರಣಗಳು ದಿನ ನಿತ್ಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಂಡು ಬಂದಿರುತ್ತವೆ. ಈ ವಿಷಯ ಮೇಲಾಧಿಕಾ–ರಿಗಳ ಗಮನಕ್ಕೆ ತಂದು ಉನ್ನತ ಮಟ್ಟದ ನುರಿತ ತಜ್ಞರಿಂದ ತನಿಖೆ ಮಾಡಿ ಮೃತ ಕುಟುಂಬಗಳಿಗೆ 50 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಿ ಆ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕು ಅವರುಗಳ ವಿರುದ್ಧ ಕ್ರಮ ಜರುಗಿಸದೇ ಇದ್ದಲ್ಲಿ ಮೃತ ಕುಟುಂಬಸ್ಥರೊಂದಿಗೆ ಆಸ್ಪತ್ರೆ ಮುಂದೆ ಹೋರಾಟ ಮಾಡಬೇಕಾಗುತ್ತದೆ ಎಂದು ಒತ್ತಾಯಿಸಿದರು.

# ಹಾವು ಕಡಿತ ನಿಯಂತ್ರಣ ಜಾಗೃತಿ, ತಂಬಾಕು ನಿಯಂತ್ರಣ ಕಾರ್ಯಕ್ರಮ

ಅ.ಶ. ಸುದ್ದಿ ಮುನಿರಬಾದ

**ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಘಟಕ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ವಾಸವಿ ಹಿರಿಯ ಪ್ರಾಥಮಿಕ ಶಾಲೆ ಕೊಪ್ಪಳ ಇವರ ಸಂಂ–ಯುಕ್ತಾಶ್ರಯದಲ್ಲಿ ಇತ್ತೀಚೆಗೆ (ಜೂ. 20ರಂದು) ಶಾಲಾ ಆವರಣದಲ್ಲಿ "ರಾಷ್ಟ್ರೀಯ ಹಾವು ಕಡಿತ ನಿಯಂತ್ರಣ ಜಾಗೃತಿ" ಕಾರ್ಯಕ್ರಮ ಹಾಗೂ "ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ" ನಡೆಯಿತು.**

ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾ–ರಿಗಳಾದ ದೇವಮ್ಮ ಅವರು ಮಾತನಾಡಿ, ಹಾವು ಕಡಿತದಿಂದ ಉಂಟಾಗುವ ಮರಣವನ್ನು ನಿಯಂತ್ರಿಸುವ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಭಾರತ ಹಳ್ಳಿಗಳ ದೇಶ ಶೇ. 70 ಕ್ಕಿಂತಲೂ ಹೆಚ್ಚು ಜನರು ಕೃಷಿಯಲ್ಲಿ ಅವಲಂಬಿತರಾಗಿದ್ದಾರೆ. ಭಾರತದಲ್ಲಿ ಪ್ರಮುಖ 4 ವಿಷಕಾರಿ ಹಾವುಗಳಾದ ನಾಗರಹಾವು, ಕಟ್ಟಾವು, ಕೊಳಕು ಮಂಡಲ ಹಾವು ಹಾಗೂ ಗರಗಸ ಮಂಡಲ ಹಾವು ಕಡಿತದಿಂದ ಉಂಟಾಗುವ ಸಾವುಗಳಲ್ಲಿ 90% ಅಧಿಕ ಸಾವುಗಳಿಗೆ ಕಾರಣವಾಗುತ್ತವೆ. ಈ 4 ಹಾವುಗಳ ಬಗ್ಗೆ ಎಚ್ಚ–ರಿಗೆ ವಹಿಸಬೇಕು ನಾಗರಹಾವು ಬಿಟ್ಟು ಉಳಿತ 03 ವಿಷಕಾರಿ ಹಾವುಗಳು ರಾತ್ರಿವೇಳೆ ಹೆಚ್ಚು ಚಟುವಟಿ–ಕೆಯಿಂದಿರುತ್ತವೆ. ಹಾಗಾಗಿ ರಾತ್ರಿವೇಳೆ ಹೊರಗಡೆ ಹೋಗುವಾಗ ಟಾರ್ಚ್ ಬಳಸಬೇಕು. ಮನೆ ಅಂಗಳವನ್ನು ಇಲಿ ಹೆಗ್ಗನಗಳಂತಹ ಹಾವುಗಳು ತಿನ್ನುವ ಜೀವಿಗಳಿಂದ ಮುಕ್ತವಾಗಿಸುವುದು.



ಹಾವುಗಳು ತಿನ್ನುವ ಜೀವಿಗಳಿಂದ ಮುಕ್ತವಾಗಿಸುವುದು. ಮನೆಯಂಗಳ ಅಥ–ವಾ ಹೊಲಗದ್ದೆಗಳಲ್ಲಿ ಸಾಮಾನ್ಯವಾಗಿ ತಿರುಗಾಡುವ ಸ್ಥಳಗಳಲ್ಲಿ ಗಿಡಗಂಟಿಗಳನ್ನು ಕಡಿದು ಸ್ವಚ್ಚವಾಗಿಟ್ಟುಕೊಳ್ಳುವುದು ಎಂದರು. ಹಾವುಗಳಿರುವ ಸಾಧ್ಯತೆ ಹೆಚ್ಚಿರುವ ಸ್ಥಳಗಳಲ್ಲಿ ಕೆಲಸ ಮಾಡುವಾಗ ಶೂಗಳನ್ನು ಬಳಸುವುದು. ರಾತ್ರಿ ಮನೆಯ ಹೊರಗೆ ಹಾಗೂ ಹೊಲಗದ್ದೆಗಳಲ್ಲಿ ಮಲಗಬೇಕಾದಾಗ ನೆಲದಲ್ಲಿ ಮಲಗದೆ ಎತ್ತರ ಪ್ರದೇಶದ ಮಂಚ ಬಳಸುವುದು, ನೆಲದಲ್ಲಿ ಮಲಗಲೇ ಬೇಕೆಂದರೆ ಕಡ್ಡಾಯವಾಗಿ ಸೊಳ್ಳೆಪರದೆ ಬಳಸುವುದು ಹಾಗೂ ರೈತರು ಹೊಲದಲ್ಲಿ ದನ–ಕರಗಳಿಗೆ ಮೇವು ಹಾಗೂ ಹಸಿಹುಲ್ಲು ಕೀಳುವಾಗ ಕುಡುಗೋಲು ಬಳಸಬೇಕು. ಒಂದು ವೇಳೆ ಹಾವು ಕಚ್ಚಿದರೆ ತಕ್ಷಣ ಸಮೀಪದ ಸರ್ಕಾರಿ ಆಸ್ಪತ್ರೆಗೆ 40 ನಿಮಿಷದೊಳಗಾಗಿ ಹೋಗಿ ಚಿಕಿತ್ಸೆಪಡೆದುಕೊಳ್ಳಬೇಕು.

ಹಾವು ಕಡೆದ ವ್ಯಕ್ತಿಯನ್ನು ಸಮಾದಾನ ಪಡಿಸಿ, ಗಾಬರಿ ಪಡಿಸಬೇಡಿ. ಹಾವಿನಿಂದ ನಿಧಾನವಾಗಿ ದೂರ ಸರಿಯಿರಿ. ರಕ್ತಬಂಧಕಪಟ್ಟಿ ಕಟ್ಟಬೇಡಿ. ಹಾವು ಕಡಿತಕ್ಕೊಳಗಾದ ವ್ಯಕ್ತಿಯನ್ನು ಎಡಭಾಗಕ್ಕೆ ಮಲಗಿಸಿ ಕಚ್ಚಿದ ಭಾಗವನ್ನು ಅಲುಗಾಡದಂತೆ ನೋಡಿಕೊಳ್ಳಿ. ಗಾಯವನ್ನು ಕತ್ತರಿಸಬೇಡಿ, ಏನನ್ನು ಹಚ್ಚಬೇಡಿ. ಹಾವು ಕಚ್ಚಿದ ವ್ಯಕ್ತಿಗೆ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಕೊಡಿಸಿ. ನಾಟಿ ಔಷಧ ಅಥವಾ ಅಸುರಕ್ಷಿತ ಚಿಕಿತ್ಸಾ ಪದ್ದತಿಯನ್ನು ಅವಲಂಬಿಸಬೇಡಿ. ಒಟ್ಟಾರೆಯಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಯ ಸುತ್ತ–ಮುತ್ತಲಿನ ಪ್ರದೇಶ ಸ್ವಚ್ಛತೆಯಿಂದ ಇಟ್ಟುಕೊಂಡು ಇದರ ಬಗ್ಗೆ ಇತರರಿಗೂ ಮಾಹಿತಿ ನೀಡಿ, ಜಾಗೃತರಾಗಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಸಮಾಜ ಕಾರ್ಯಕರ್ತೆ ಸರಸ್ವತಿ ಅವರು ಮಾತನಾಡಿ, ತಂಬಾಕು ಸೇವನೆಯಿಂದಾಗುವ ಕ್ಯಾನ್ಸರ್ ಹೃದಯ ಸಂಬಂಧಿ ಕಾಯಿಲೆ, ಶ್ವಾಸಕೋಶದ ಕಾಯಿಲೆ, ಲಕ್ವಾ ಇತರೆ ಕಾಯಿಲೆಗಳು ಬರಬಹುದು. ಪ್ರತಿ ಸಿಗರೇಟ್, ಬೀಡಿ ಸೇವನೆಯಿಂದ 7 ನಿಮಿಷ ಆಯುಷ್ಯ ಕಡಿಮೆ ಮಾಡುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸುತ್ತದೆ. ಆದ್ದ–ರಿಂದ ಎಲ್ಲರೂ ತಂಬಾಕು ಸೇವನೆಯಿಂದ ದೂರವಿದ್ದು, ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ಹೇಳಿದರು. ಕಾರ್ಯಕ್ರಮದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಲ್.ವಿ ಸಜ್ಜನ್, ಸಹಾಯಕ ಪ್ರಾಧ್ಯಾಪಕರು, ಉಪನ್ಯಾಸಕರು ಹಾಗೂ ಇತರೆ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka